# ಭಾರತೀಯ ಸಂಸ್ಕೃತಿಯ ಪರಂಪರೆ

ಸ್ವಾಮಿ ನಿತ್ಯಸ್ಥಾನಂದ

ಭಾರತೀಯ ಸಂಸ್ಕೃತಿ ವಿವಿಧ ಕಾಲಘಟ್ಟಗಳಲ್ಲಿ ಹೇಗೆ ಬೆಳೆದುಬಂತು, ಯಾವ ಬಗೆಯ ಬದಲಾವಣೆಗಳನ್ನು ಕಂಡಿತು ಹಾಗೂ ಎಂತಹ ಸವಾಲುಗಳನ್ನು ಎದುರಿಸಬೇಕಾಗಿಬಂತು ಎಂಬ ಐತಿಹಾಸಿಕ ವಿವರಗಳೊಂದಿಗೆ ಈ ಲೇಖನದಲ್ಲಿ ಚಿಂತನೆ ನಡೆಸಲಾಗಿದೆ. ಲೇಖಕರು 'ವಿವೇಕಪ್ರಭ'ದ ಮೊದಲನೆಯ ಸಂಪಾದಕರಾಗಿದ್ದರು; ಹಾಗೂ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದರು. ಪ್ರಸಿದ್ಧ ಪ್ರವಚನಕಾರರೂ, ಬರಹಗಾರರೂ, ಉತ್ತಮ ಚಿಂತಕರೂ ಆಗಿರುವ ಪೂಜ್ಯ ಸ್ವಾಮೀಜಿಯವರು ಅನೇಕ ಗ್ರಂಥಗಳನ್ನು ರಚಿಸಿದ್ದು, ಪ್ರಸ್ತುತ ದಾವಣಗೆರೆ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿದ್ದಾರೆ.

### ಭಾರತೀಯ ಸಂಸ್ಕೃತಿ ಎಂಬ ಜೀವನದಿ

''ಕ್ರಿಸ್ತನ ಕಾಲವು ಆರಂಭವಾಗುವುದಕ್ಕಿಂತ ನೂರಾರು ವರ್ಷಗಳ ಹಿಂದೆ, ಪ್ರವಾದಿಯು ಉಗಮವಾಗುವುದರ ಪೂರ್ವದಲ್ಲಿ , ಯಹೂದಿ ಮತದ ಸಂಸ್ಥಾಪಕನು ಪ್ರವರ್ಧಮಾನಕ್ಕೆ ಬರುವುದಕ್ಕೂ ಮುಂಚೆ, ಆಂಗ್ಲ ಜನಾಂಗದ ಪೂರ್ವಜರು ಗುಹೆಗಳಲ್ಲಿ ಮತ್ತು ಕಾಡುಗಳಲ್ಲಿ ತಮ್ಮ ಶರೀರದ ಮೇಲೆ ಹಚ್ಚೆಗಳನ್ನು ಹಾಕಿಕೊಂಡು, ಪ್ರಾಣಿಗಳ ಚರ್ಮವನ್ನು ಧರಿಸಿ ಹಸಿಮಾಂಸವನ್ನು ತಿಂದು ಬದುಕುತ್ತಿರಬಹುದಾದ ಕಾಲಘಟ್ಟದಲ್ಲಿ ಪ್ರಾಚೀನ ಎನ್ನಬಹುದಾದ ಆ ಕಾಲದಲ್ಲಿಯೇ ಭರತವರ್ಷದ ದಿಗಂತದ ಮೇಲೆ ನಿಜವಾದ ನಾಗರಿಕತೆಯ ಪ್ರತ್ಯುಷೆಯು ಮೂಡಿತ್ತು'' ಎಂದು ಸ್ವಾಮಿ ಅಭೇದಾನಂದರು ಅಭಿಪ್ರಾಯಪಡುತ್ತಾರೆ *(Complete Works of Swami Abhedananda, Vol.2, Ramakrishna Vedanta Math, Calcutta, 1967. p.17).*

ಭಾರತೀಯ ಸಂಸ್ಕೃತಿ ಎಂಬ ಮಹಾಸ್ರೋತವು ಸಹಸ್ರಾರು ವರ್ಷಗಳಿಂದ ಪ್ರವಹಿಸುತ್ತಲೇ ಇದೆ. ಅದರ ಉಗಮಸ್ಥಾನವು ಇತಿಹಾಸಪೂರ್ವ ಕಾಲದ ಗುರುತುಹಚ್ಚಲಾಗದ ಭೂಮಿಕೆಯಲ್ಲಿದೆ. ಈ ನದಿಯು ಇತಿಹಾಸದುದ್ದಕ್ಕೂ ನಿತ್ಯಧಾರೆಯೋ ಎಂಬಂತೆ ಪ್ರವಹಿಸುತ್ತಿರುವಾಗ, ಅನೇಕ ಸಾಂಸ್ಕೃತಿಕ ಉಪನದಿಗಳನ್ನು ತನ್ನೊಳಗೆ ಬರಮಾಡಿಕೊಂಡಿದೆ. ಅವುಗಳನ್ನು ಜೀರ್ಣಿಸಿಕೊಂಡು ತನ್ನ ಶರೀರದ ಅವಿಭಾಜ್ಯ ಅಂಗಗಳನ್ನಾಗಿಸಿಕೊಂಡಿದೆ. ಅದೊಂದು ಜೀವನದಿಯಾಗಿ ಈಗಲೂ ಪ್ರವಹಿಸುತ್ತಿದೆ. ಭರತಖಂಡದ ಲಕ್ಷಾಂತರ ಜನರಿಗೆ ಜೀವನಾಧಾರವಾಗಿದೆ. ಜೇಮ್ಸ್ ಹೆಚ್. ಕಸಿನ್ಸ್ ಅವರು ಹೇಳುತ್ತಾರೆ: ''ಭಾರತೀಯ ಸಂಸ್ಕೃತಿಯು ಹೊಂದಿರದ ಒಂದು ಲಕ್ಷಣವೆಂದರೆ ಶೈಥಿಲ್ಯ. ಇಂದಿನ ಭಾರತವು ಶತಶತಮಾನಗಳ ಭಾರತವಾಗಿದೆ. ಅವಳ ಪುರಾತನತೆಯು ವರ್ತಮಾನದಲ್ಲಿ ಪಳೆಯುಳಿಕೆಯಂತೆ ಉಳಿದಿರುವ ಹೆಮ್ಮೆಯ ಪ್ರತೀಕವಲ್ಲ; ಅವಳ ಭೂತಕಾಲವು ಪ್ರಸ್ತುತ ವರ್ತಮಾನದಲ್ಲಿ ಸಕ್ರಿಯವಾಗಿದೆ.'' *(Hinduism: The Faith Eternal, by Dr. Satish K. Kapoor, Advaita Ashrama, 2015, ಇದರಲ್ಲಿ ಪು. xi ರಲ್ಲಿ ಉದ್ಧೃತ.)* ಸಚೇತನವಾದ ಭಾರತೀಯ ಸಂಸ್ಕೃತಿಯನ್ನು ಕುರಿತು ಸೋದರಿ ನಿವೇದಿತಾ ಮೆಚ್ಚುಗೆಯಿಂದ ನುಡಿಯುತ್ತಾರೆ: ''ಭಾರತವೇ ಭಾರತದ ಇತಿಹಾಸದ ಪುಸ್ತಕ ವಾಗಿದೆ. ಆದ್ದರಿಂದ ಪ್ರವಾಸ ಮಾಡಿ ಭಾರತವನ್ನು ದರ್ಶಿಸುವು ದೆಂದರೆ ಆ ಇತಿಹಾಸವನ್ನು ಅಧ್ಯಯನ ಮಾಡಿದಂತೆಯೇ ಆಗಿದೆ.'' *(Footfalls of Indian History, p.14, Advaita Ashrama, Kolkata.)*

ಆದರೆ ಆ ಪ್ರವಾಸವನ್ನು ಪೂರ್ವಾಗ್ರಹಗಳಿಂದ ಮುಕ್ತವಾಗಿ ತೆರೆದ ಮನಸ್ಸಿನಿಂದ ಕೈಗೊಳ್ಳಬೇಕಾಗಿದೆ. ವಿದೇಶೀಯವೂ, ಈ ನೆಲಕ್ಕೆ ಅನ್ಯವೂ ಆದ ಮನೋಭೂಮಿಕೆಯ ಕನ್ನಡಕವನ್ನು ಹಾಕಿಕೊಂಡು ಭಾರತೀಯ ಸಂಸ್ಕೃತಿಯನ್ನು ಅಧ್ಯಯನ ಮಾಡಲು ಹೋಗಬಾರದು. ವಿಶೇಷ ಗುಣಲಕ್ಷಣಗಳಿಂದ ಕೂಡಿದ ಭವ್ಯ ಇತಿಹಾಸವು ಈ ಸಂಸ್ಕೃತಿಗೆ ಇದೆ. ಇತರ ಸಂಸ್ಕೃತಿಗಳ ಅಂಶಗಳನ್ನು ಅದು ಎರವಲು ಪಡೆದಿರುವುದರ ಜೊತೆಗೆ ಆ ಸಂಸ್ಕೃತಿಗಳ ಬೆಳವಣಿಗೆಗೂ ತನ್ನದೇ ಆದ ಅದ್ಭುತವಾದ ಮತ್ತು ವಿಪುಲವಾದ ಕಾಣಿಕೆಗಳನ್ನೂ ಅದು ನೀಡಿದೆ. ಅದೊಂದು ಸಜೀವವಾದ ಸಂಸ್ಕೃತಿಯಾಗಿರುವುದರಿಂದ, ಅದರ ಅಧ್ಯಯನವು ವಸ್ತುಸಂಗ್ರಹಾಲಯಗಳಿಗೆ, ಇತಿಹಾಸದ ಪುಸ್ತಕಗಳಿಗೆ, ಪುರಾತತ್ವ ಸ್ಮಾರಕಗಳಿಗೆ ಅಥವಾ ಪ್ರಬಲವಾದ ಪೂರ್ವಾಗ್ರಹಗಳ ಆವೇಶದಲ್ಲಿ ಬರೆದಿರುವ ಪುಸ್ತಕಗಳ ಅಧ್ಯಯನಕ್ಕೆ ಸೀಮಿತವಾಗಬಾರದು. ಸೋದರಿ ನಿವೇದಿತಾ ಹೇಳುತ್ತಾರೆ: ''ಪುರಾತನ ರಾಷ್ಟ್ರಗಳ ಮಧ್ಯದಲ್ಲಿ ಭಾರತವು ಮಾತ್ರವೇ ಇನ್ನೂ ತಾರುಣ್ಯದಲ್ಲಿದೆ, ಇನ್ನೂ ಬೆಳೆಯುತ್ತಿದೆ, ತನ್ನ ಭೂತಕಾಲದ ಮೇಲೆ ದೃಢವಾದ ಪ್ರಾಬಲ್ಯವನ್ನು ವರ್ತಮಾನದಲ್ಲಿಯೂ ಹೊಂದಿದೆ, ಭೂತಕಾಲದ ಅಮೂಲ್ಯ ಸಂಗತಿಗಳನ್ನು ಆಧರಿಸಿ ತನ್ನ ಭವ್ಯಭವಿಷ್ಯವನ್ನು ರೂಪಿಸಲು ಪರಿಶ್ರಮಿಸುತ್ತಿದೆ.'' *(ಅಲ್ಲೇ, ಪು. ೧೭)*

### ವೇದಸಂಸ್ಕೃತಿ

ಸುಮಾರು ಕ್ರಿಸ್ತಪೂರ್ವ ಮೂರನೇ ಸಹಸ್ರಮಾನಕ್ಕೆ ಸೇರಿದ್ದೆಂದು ಹೇಳಲ್ಪಡುವ ವೇದ ಜ್ಞಾನಯುಗದಲ್ಲಿ ಭಾರತೀಯ ಸಂಸ್ಕೃತಿಯು ಉದಯವಾಯಿತು ಎಂದು ಹೇಳುತ್ತಾರೆ. ಆದರೆ ನಂತರ ಪತ್ತೆಯಾದ ಇಂಡಸ್-ಸರಸ್ವತಿ ನಾಗರಿಕತೆಯ ವಿಚಾರದ ಬೆಳಕಿನಲ್ಲಿ ಇದರ ಇತಿಹಾಸವು ಕ್ರಿಸ್ತಪೂರ್ವ ೪೦೦೦ ವರ್ಷಗಳಿಗೆ

ಹೋಗಿ ನಿಲ್ಲುತ್ತದೆ. ಆದರೆ ಈಗ ಇತಿಹಾಸಜ್ಞರ ಅಭಿಪ್ರಾಯವು ಭಾರತೀಯ ಸಂಸ್ಕೃತಿಯ ಉಗಮವನ್ನು ವೈದಿಕ ನಾಗರಿಕತೆ ಯೊಡನೆಯೇ ಸಂಯೋಗಗೊಳಿಸುತ್ತದೆ. ವೇದವಾಙ್ಮಯವೇ ವೈದಿಕ ನಾಗರಿಕತೆಯನ್ನು ತಿಳಿಯಲು ಇರುವ ಪ್ರಧಾನ ಮೂಲ ವಾಗಿದೆ. ಇಂಡಸ್-ಸರಸ್ವತಿ ನಾಗರಿಕತೆಯ ಪುರಾತತ್ವ ಶೋಧ ನೆಯ ಪುರಾವೆಗಳು ಈ ಅಂಶವನ್ನು ಪುಷ್ಟಿಗೊಳಿಸುತ್ತವೆ. ವೇದ ಗಳ ಕಾಲವನ್ನು ಕುರಿತು ಎಷ್ಟೋ ಭಿನ್ನಾಭಿಪ್ರಾಯಗಳಿದ್ದರೂ, ವೇದಗಳು ಅತ್ಯಂತ ಪುರಾತನ ಕಾಲಕ್ಕೆ ಸೇರಿರುವುದು ಎಂದೂ, ಮತ್ತು ಜಗತ್ತಿನ ಅತ್ಯಂತ ಪ್ರಾಚೀನ ಸಂಸ್ಕೃತಿಗಳಲ್ಲಿ ಒಂದನ್ನು ಪ್ರತಿನಿಧಿಸುತ್ತದೆ ಎಂದೂ ಹೇಳಬಹುದಾಗಿದೆ. ವಿಶೇಷವೇನೆಂ ದರೆ ಇಂದಿಗೂ ವೇದಸಾಹಿತ್ಯವು ತನ್ನ ಪ್ರಸ್ತುತತೆಯನ್ನು ಕಳೆದು ಕೊಂಡಿಲ್ಲ. ಮ್ಯಾಕ್ಸ್‌ಮುಲ್ಲರ್ ಹೇಳುತ್ತಾರೆ: ''ಕ್ರಿಸ್ತಪೂರ್ವ ೧೫೦೦ ಮತ್ತು ೧೦೦೦ ನಡುವಿನ ಕಾಲದಲ್ಲಿ ವೇದಮಂತ್ರಗಳು ರಚನೆಯಾದವೆಂದು ಭಾವಿಸಿದರೂ, ಅಷ್ಟು ಪ್ರಾಚೀನಕಾಲ ದಲ್ಲಿಯೇ ಅತ್ಯಂತ ಆಧುನಿಕ ಎಂದು ನಮಗನಿಸುವ ವಿಚಾರ ಧಾರೆಯನ್ನು ಭಾರತೀಯರು ಹೇಗೆ ವ್ಯಕ್ತಪಡಿಸಿದರು ಎಂಬುದು ನಮಗೆ ಅರ್ಥವಾಗದ ಸಂಗತಿಯಾಗಿದೆ.'' ಇನ್ನೂ ಮುಂದು ವರಿದು ಅವರು ಹೇಳುವುದೇನೆಂದರೆ: ''ಮಾನವ ಜನಾಂಗದ ಸಾಂಸ್ಕೃತಿಕ ಶಿಕ್ಷಣದಲ್ಲಿ ವೇದಸಾಹಿತ್ಯವು ನಮಗೆ ಒಂದು ಹೊಸ ವಿಭಾಗವನ್ನೇ ತೆರೆದಂತೆ ತೋರುವುದು. ಇದಕ್ಕೆ ಸರಿಸಾಟಿಯಾಗು ವುದನ್ನು ನಾವು ಬೇರೆಲ್ಲಿಯೂ ಕಾಣ ಲಾರೆವು.'' *('India: What Can It Teach Us', p. 111., ಬಹಾದುರ್ ಮಲ್ ಅವರ 'A Story of Indian Culture' ಕೃತಿಯ ಪು. ೧೫ರಲ್ಲಿ ಉದ್ಧೃತವಾಗಿರುವಂತೆ, ಪ್ರಕಾಶಕರು: Vishwewsarananda Vedic Research Institute, Hosiar pur, 1956.)*

ವೇದಕಾಲದ ರಾಜಕೀಯ ವ್ಯವಸ್ಥೆಯಲ್ಲಿ ಏಕಚಕ್ರಾಧಿಪತ್ಯವೇ ಪ್ರಧಾನವಾದ ಆಡಳಿತ ಕ್ರಮವಾಗಿತ್ತು. ಆದರೆ ರಾಜರು ಆಗ ಪ್ರಜೆಗಳ ಅನುಮೋದನೆಯಿಂದ ಆಯ್ಕೆಯಾಗುತ್ತಿದ್ದರು. ಮಗನು ತಂದೆಯ ನಂತರ ಅಧಿಕಾರಕ್ಕೆ ಬರಬೇಕಾಗಿದ್ದರೆ ಪ್ರಜಾಪ್ರತಿನಿಧಿ ಗಳ ಅನುಮತಿಯನ್ನು ತೆಗೆದುಕೊಳ್ಳಬೇಕಾಗಿತ್ತು. ಆದ್ದರಿಂದ ರಾಜನ ಆಡಳಿತವಿದ್ದರೂ ಪ್ರಜಾಪ್ರಭುತ್ವದ ತತ್ತ್ವಗಳನ್ನು ಪಾಲಿಸ ಲಾಗುತ್ತಿತ್ತು. ಜನರ ಆಶೋತ್ತರಗಳೇ ರಾಜನ ಸ್ಥಾನವನ್ನು ನಿರ್ಧ ರಿಸಿ ರಕ್ಷಿಸುತ್ತಿದ್ದುದು. ಸಭಾ ಮತ್ತು ಸಮಿತಿ ಎಂಬ ಪ್ರಜೆಗಳ ಪ್ರಾತಿನಿಧಿಕ ಸಂಸ್ಥೆಗಳ ಅಭಿಪ್ರಾಯಗಳನ್ನು ರಾಜನು ಮಾನ್ಯ ಮಾಡಲೇಬೇಕಾಗಿತ್ತು.

ವೈದಿಕ ಆರ್ಯರ ಆರ್ಥಿಕ ಸ್ಥಿತಿಯು ಅತ್ಯಂತ ಸುಭದ್ರ ವಾಗಿತ್ತು ಎಂದು ತಿಳಿದುಬರುತ್ತದೆ. ಕೃಷಿಯೇ ಆದಾಯದ ಪ್ರಧಾನ ಮೂಲವಾಗಿತ್ತು. ಚಿನ್ನ, ಬೆಳ್ಳಿ, ತಾಮ್ರ, ಕಬ್ಬಿಣ ಇತ್ಯಾದಿ ಅಪಾರ ಸಂಪತ್ತು ಹೊಂದಿದ್ದ ಭೂಮಿಯನ್ನು ಕುರಿತು ಅವರಿಗೆ ಪೂಜ್ಯಭಾವವಿತ್ತು. ಅವರು ಗೋವುಗಳನ್ನು ಪ್ರೀತಿಸು ತ್ತಿದ್ದರು. ಅವುಗಳನ್ನು ಕುರಿತು ಪವಿತ್ರ ಮನೋಭಾವ ಅವರಿ ಗಿತ್ತು. ವ್ಯಾಪಾರ ವಿನಿಮಯದಲ್ಲಿ ಗೋವುಗಳು ಘಟಕಗಳಾಗಿ ಬಳಸಲ್ಪಡುತ್ತಿದ್ದವು. ಆರ್ಯರು ದೂರದ ದೇಶಗಳೊಂದಿಗೆ ವಾಣಿಜ್ಯ ಸಂಬಂಧ ಬೆಳೆಸಿದ್ದರು. ಅಂತರ್ದೇಶೀಯ ವ್ಯಾಪಾ ರವೂ ಸುವ್ಯವಸ್ಥಿತವಾಗಿತ್ತು. ಋಗ್ವೇದದ ಕಾಲದಲ್ಲಿ ವೃತ್ತಿಗಳನ್ನು ಆಧರಿಸಿ ಸಮಾಜವು ವರ್ಗೀಕೃತವಾಗಿತ್ತು. ಆದರೆ ಕಾಲಾನಂತರ ದಲ್ಲಿ ಕಠೋರವಾದ ಗೋಡೆಗಳಾಗಿ ಇವು ಮಾರ್ಪಟ್ಟಂತೆ ಆಗ ಇನ್ನೂ ಆಗಿರಲಿಲ್ಲ. ಒಂದು ವರ್ಗಕ್ಕೆ ಸೇರಿದ ಜನ ತಮ್ಮ ಆಯ್ಕೆ ಯಂತೆ ಬೇರೆ ವರ್ಗದ ವೃತ್ತಿಯನ್ನು ಅನುಸರಿಸುವುದು ಅಪ ರೂಪವಾಗಿರಲಿಲ್ಲ. ಕಮ್ಮಾರ, ಕುಂಬಾರ, ಬಡಗಿ, ನೇಯ್ಗೆಗಾರ ಇತ್ಯಾದಿ ಕರಕುಶಲ ಕರ್ಮಿಗಳ ಬಗ್ಗೆ ಋಗ್ವೇದವು ಉಲ್ಲೇಖ ಮಾಡಿದೆ.

ವೇದಗಳ ಕಾಲದಲ್ಲಿ ಪ್ರತಿಯೊಂದು ವೃತ್ತಿ ಅಥವಾ ಕಾಯಕ ಗಳಿಗೆ ತಮ್ಮದೇ ಆದ ಘನತೆ ಗೌರವಗಳಿದ್ದವು. ಪ್ರತಿಯೊಬ್ಬನೂ ತನ್ನ ಅಭಿರುಚಿಗನುಸಾರವಾಗಿ ಯಾವುದೇ ವೃತ್ತಿಯನ್ನು ಅನು ಸರಿಸಬಹುದಾಗಿತ್ತು. ಮ್ಯಾಕ್ಸ್‌ಮುಲ್ಲರ್ ಅವರ ಅಭಿಪ್ರಾಯ ವೇನೆಂದರೆ: ''ಮನುಸ್ಮೃತಿ ಮತ್ತು ವರ್ತಮಾನದ ಸಮಾಜ ವನ್ನು ಕಂಡು ಜಾತಿ ಎಂಬುದು ಅತ್ಯಂತ ಪ್ರಾಚೀನವಾದ ಧಾರ್ಮಿಕ ಬೋಧನೆಯಾದ ವೇದಗಳ ಭಾಗವಾಗಿತ್ತೇ ಎಂಬ ಪ್ರಶ್ನೆಗೆ ನಿರ್ಣಾಯಕವಾಗಿ ಇಲ್ಲ ಎಂದೇ ನಾವು ಉತ್ತರಿಸ ಬಹುದು. ವೇದಮಂತ್ರಗಳ ಯಾವುದೇ ಋಷಿಯು ಸಂಕೀರ್ಣ ಜಾತಿವ್ಯವಸ್ಥೆಯ ಪರವಾಗಿ ಏನನ್ನೂ ಹೇಳಿಲ್ಲ; ಶೂದ್ರರ ದಾರುಣ ಸ್ಥಿತಿಯನ್ನು ಯಾರೂ ಅನುಮೋದಿಸಿಲ್ಲ. ಭಿನ್ನ ಭಿನ್ನ ವರ್ಗಗಳ ಜನರು ಕೂಡಿಬಾಳುವುದನ್ನು ನಿರ್ಬಂಧಿಸುವ ನಿಷೇಧಾತ್ಮಕ ನಿಯಮಗಳು ಯಾವುವೂ ಇರಲಿಲ್ಲ. ಒಟ್ಟಿಗೆ ಆಹಾರ, ಪಾನೀಯ ಗಳನ್ನು ಸೇವಿಸಲು ವಿಭಿನ್ನ ವರ್ಗದ ಜನರ ನಡುವೆ ವೈವಾಹಿಕ ಸಂಬಂಧವನ್ನು ಬೆಳೆಸಲು ಯಾವ ಪ್ರತಿಬಂಧಕ ನಿಯ ಮವೂ ಇರಲಿಲ್ಲ.'' *('A Story of Indian Culture' ನಲ್ಲಿ ಉದ್ಧೃತ)*

ಶೂದ್ರರು ಸಮಾಜದ ಶ್ರಮಿಕ ವರ್ಗದವರಾಗಿದ್ದರು. ಆದರೆ ಅಸ್ಪೃಶ್ಯತೆಯ ಆಚರಣೆಯು ಆಗ ಇರಲಿಲ್ಲ; ಅದು ಕಾಲಾ ನಂತರದಲ್ಲಿ ಬೆಳೆದ ರೂಢಿಯಾಗಿದೆ. ಶೂದ್ರರಿಗೂ ಸಹ ಸಾಮಾ ಜಿಕ ವ್ಯವಸ್ಥೆಯ ಉನ್ನತ ಸ್ತರಗಳಿಗೆ ಏರಲು ಅವಕಾಶವಿತ್ತು. ಐತರೇಯ ಬ್ರಾಹ್ಮಣದ ಉಲ್ಲೇಖವನ್ನು ಮಾಡುತ್ತಾ ಸ್ವಾಮಿ ತ್ಯಾಗೀಶಾನಂದರು ಹೇಳುತ್ತಾರೆ: ''ಕವಶ, ಐತರೇಯ, ಕಕ್ಷೀವತ ಮುಂತಾದ ಋಷಿಗಳು ಶೂದ್ರ ಮಾತೆಗೆ ಜನಿಸಿದವರಾಗಿದ್ದರೂ ವೇದ ಮಂತ್ರಗಳ ದ್ರಷ್ಟಾರರಾಗಿದ್ದಾರೆ.'' *(Ishavasya Upani shad and True Import of Dharma, p.21, ವಿವೇಕಹಂಸ ಪ್ರಕಾಶನ, ಬೆಂಗಳೂರು)* ಅವರು ಇನ್ನಷ್ಟು ಬೆಳಕು ಚೆಲ್ಲುತ್ತಾ ಹೇಳುತ್ತಾರೆ: ''ಎಲ್ಲಾ ವರ್ಣಗಳೂ ಪರಸ್ಪರ ಬಂಧುಗಳೇ ಆಗಿದ್ದು, ವೇದಾ ಧ್ಯಯನವನ್ನು ಮಾಡಲು ಮತ್ತು ಸಂಸ್ಕಾರವನ್ನು ಪಡೆಯಲು ಎಲ್ಲರೂ ಸಮಾನವಾಗಿ ಅರ್ಹರಾಗಿದ್ದರು. ಅವರೆಲ್ಲಾ ಬ್ರಹ್ಮನ ವೈವಿಧ್ಯತೆಗಳೇ ಆಗಿದ್ದಾರೆ. ವೇದಗಳು ಅವರೆಲ್ಲರಿಗೂ ಸರ್ವ

ಸಮಾನವಾದುದು. ವೇದಾಧ್ಯಯನವನ್ನು ಅವರು ದೃಢ ನಿಶ್ಚಯದಿಂದ ಮಾಡಿ, ವೈದಿಕ ವಿಧಿಗಳನ್ನು ಅನುಸರಿಸಿದಾಗ ಅವರೆಲ್ಲರೂ ಬ್ರಾಹ್ಮಣರಾಗುತ್ತಿದ್ದರು.'' *(ಅಲ್ಲೇ, ಪು. ೮೦)*

ಪಿತೃಕೇಂದ್ರಿತ ಕೌಟುಂಬಿಕ ಪದ್ಧತಿಯನ್ನು ಆರ್ಯರು ವೇದಗಳ ಕಾಲದಲ್ಲಿ ಹೊಂದಿದ್ದರು. ತಂದೆಯಾದವನು ಯಜಮಾನನಾಗಿ ಕುಟುಂಬದ ಎಲ್ಲ ಸದಸ್ಯರ ಮೇಲೂ ಸಂಪೂರ್ಣ ಅಧಿಕಾರವನ್ನು ಹೊಂದಿದ್ದನು. ಪ್ರೇಮ, ಸೌಹಾರ್ದತೆ ಮತ್ತು ಸಹಕಾರದ ಮೌಲ್ಯಗಳು ಕೌಟುಂಬಿಕ ವಾತಾವರಣದಲ್ಲಿ ತುಂಬಿ ತುಳುಕುತ್ತಿದ್ದವು. ಪೋಷಕರು ಮತ್ತು ಹಿರಿಯರನ್ನು ಕುಟುಂಬದೊಳಗೆ ಅತ್ಯಂತ ಗೌರವದಿಂದ ಕಾಣಲಾಗುತ್ತಿತ್ತು. ಶಿಕ್ಷಣವು ಬಾಲಕರು ಮತ್ತು ಬಾಲಕಿಯರಿಗೆ ಸಮಾನವಾಗಿ ದೊರೆಯುತ್ತಿತ್ತು. ವೇದಮಂತ್ರದ್ರಷ್ಟಾರರಾಗಿ ಅನೇಕ ಸ್ತ್ರೀಯರೂ ಇರುವುದನ್ನು ನಾವು ಗಮನಿಸಬಹುದು. ಸೈನ್ಯದ ಸೇವೆಗಾಗಿ ತರಬೇತಿ ಪಡೆಯುತ್ತಿರುವ ಮಹಿಳೆಯರ ಉಲ್ಲೇಖವೂ ಕಂಡುಬರುತ್ತದೆ. ಒಂದು ವೇದಮಂತ್ರವು ಹೀಗೆ ಘೋಷಿಸುತ್ತದೆ: ''ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿರುವ ಒಬ್ಬ ಹೆಣ್ಣುಮಗಳಿಗೆ ತತ್ಸಮಾನ ವಿದ್ಯಾರ್ಹತೆಯುಳ್ಳ ಒಬ್ಬ ತರುಣ ಪುರುಷನೊಡನೆ ವಿವಾಹ ಮಾಡಬೇಕು.'' *(ಯಜುರ್ವೇದ, ೮.೧)* *'A Short History of Women'* ಎಂಬ ಗ್ರಂಥದಲ್ಲಿ ಜೆ.ಎಹ್.ಡೇವಿಸ್ ಎಂಬ ಚಿಂತಕನು ಬರೆಯುತ್ತಾನೆ: ''ಅಥೆನ್ಸ್ ನಗರದಲ್ಲಿ ಸ್ತ್ರೀಯರಿಗೆ ಎಷ್ಟು ಗೌಣವಾದ ಸ್ಥಾನವಿತ್ತು ಎಂದರೆ ಅವರು ಕೇವಲ ತರಕಾರಿಗಳಂತೆ ಪರಿ ಗಣಿಸಲ್ಪಟ್ಟಿದ್ದರು. ಸ್ಪಾರ್ಟ ನಗರದಲ್ಲಿ ಮಹಿಳೆಯರ ವಿಷಯ ಪ್ರಸ್ತಾಪವೇ ಆಗುತ್ತಿರಲಿಲ್ಲ ಏಕೆಂದರೆ ಗಂಡಸರು ಮತ್ತು ಹೆಂಗ ಸರು ಪ್ರಾಣಿಗಳಿಗಿಂತ ಸ್ವಲ್ಪವೇ ಉತ್ತಮವಾದ ಸ್ಥಾನದಲ್ಲಿದ್ದರು. ಆದರೆ ಭಾರತದಲ್ಲಿ ಬಾಲಕ, ಬಾಲಕಿಯರಿಗೆ ಸಮಾನವಾಗಿ ಉಪ ನಯನ ಸಂಸ್ಕಾರವನ್ನು ಮಾಡಿ, ವಿದ್ಯಾಭ್ಯಾಸಕ್ಕೆ ಒಟ್ಟಿಗೆ ದೀಕ್ಷೆ ಯನ್ನು ನೀಡಲಾಗುತ್ತಿತ್ತು.'' ಈ ಮೇಲ್ಕಂಡ ಎಲ್ಲಾ ನಿದರ್ಶನ ಗಳಿಂದ ವೇದಗಳ ಕಾಲದಲ್ಲಿ ಬಾಲ್ಯವಿವಾಹವು ಇರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಸಂಸಾರದ ನಾಲ್ಕು ಗೋಡೆಗಳ ಮಧ್ಯದಲ್ಲಿ ಮಹಿಳೆಯರ ಚಲನೆಯು ನಿರ್ಬಂಧಿತವಾಗಿರಲಿಲ್ಲ. ಸಾರ್ವಜನಿಕವಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಹಬ್ಬಗಳಲ್ಲಿ ಸ್ತ್ರೀಯರು ಮುಕ್ತವಾಗಿ ಪಾಲ್ಗೊಳ್ಳಲು ಅವಕಾಶವಿತ್ತು. ಸ್ವಾಮಿ ಅಭೇದಾನಂದರ ಅಭಿಪ್ರಾಯ: ''ವೇದಕಾಲೀನ ಭಾರತವು ಸ್ತ್ರೀಯರನ್ನು ಅದೆಷ್ಟು ಗೌರವದಿಂದ ಕಾಣುತ್ತಿತ್ತೆಂದರೆ ಅದನ್ನು ಪೂಜ್ಯಭಾವವೆಂದೇ ಪರಿಗಣಿಸಬಹುದು. ಪೌರಾತ್ಯ ದೇಶಗಳಲ್ಲಿ ಮಹಿಳೆಯರಿಗೆ ಘನತೆಯ ಸ್ಥಾನಮಾನಗಳೂ ಇರಲಿಲ್ಲವೆಂದೂ, ಅವರು ಭೋಗಸಾಮಗ್ರಿಗಳಾಗಿದ್ದರೆಂದೂ ವಿಧೇ ಯತೆಯಲ್ಲಿ ಎಲ್ಲದಕ್ಕೂ ತಲೆಬಾಗಿಸಿ ದುಡಿಯುವವರು ಮಾತ್ರವೇ ಆಗಿದ್ದರೆಂದು ಮಾಡುವ ಆರೋಪ, ವಿಮರ್ಶೆಗಳು ನಿರಾಧಾರವಾದದ್ದು.''

ವಿವಾಹಿತ ಮಹಿಳೆಯರು ತಮ್ಮ ತಂದೆಯ ಆಸ್ತಿಯ ಮೇಲೆ ಯಾವ ಹಕ್ಕನ್ನೂ ಹೊಂದಿರಲಿಲ್ಲ ಎಂದು ತಿಳಿದುಬರುತ್ತದೆ. ಮೃತನಾದ ಗಂಡನ ಆಸ್ತಿಯ ಮೇಲೂ ಅವರು ಯಾವ ಹಕ್ಕನ್ನೂ ಚಲಾಯಿಸುವಂತಿರಲಿಲ್ಲ ಎಂದು ತೋರಿಬರುತ್ತದೆ. ಆದರೆ, ಕಾನೂನಿನ ವ್ಯವಸ್ಥೆಯಲ್ಲಿ ಈ ಅಸಮಾನ ಸ್ಥಾನವಿದ್ದರೂ, ಕುಟುಂಬದ ಉಳಿದ ಸದಸ್ಯರು ಮಹಿಳೆಯರನ್ನು ಅಪಾರ ಗೌರವದಿಂದ ಕಾಣುತ್ತಿದ್ದುದರಿಂದ, ಅವರಿಗೆ ಜೀವನದಲ್ಲಿ ಯಾವುದಕ್ಕೂ ತೊಂದರೆಯಾಗುತ್ತಿರಲಿಲ್ಲ. ವಿಧವಾವಿವಾಹ ಪದ್ಧತಿಯು ರೂಢಿಯಲ್ಲಿರಲಿಲ್ಲವೆಂದು ತೋರುತ್ತದೆ. ಆದರೆ ಗಂಡನ ಮರಣದ ಬಳಿಕ ಹಿರಿಯರು ಮತ್ತು ಪುರೋಹಿತರ ಸಮ್ಮುಖದಲ್ಲಿ ಗಂಡನ ಕಿರಿಯ ಸೋದರ ಅಥವ ನಿಕಟ ಸಂಬಂಧಿಯನ್ನು ಪತಿಯಾಗಿ ಸ್ವೀಕರಿಸಲು ಅವಕಾಶವಿತ್ತು. ಆದರೆ ಇದೊಂದು ಪರಸ್ಪರ ಒಪ್ಪಂದ ವಿಷಯವಾಗಿತ್ತೇ ಹೊರತು ಪುನರ್ವಿವಾಹ ಪದ್ಧತಿಯು ಚಾಲ್ತಿಯಲ್ಲಿರಲಿಲ್ಲ.

ಒಂದು ಸಮಾಜದ ಸಾಂಸ್ಕೃತಿಕ ಗುಣಮಟ್ಟವನ್ನು ಆ ಸಮಾಜದಲ್ಲಿ ಪ್ರಚಲಿತವಾಗಿರುವ ನೈತಿಕ ಪರಿಕಲ್ಪನೆಗಳ ಆಧಾರದ ಮೇಲೆ ತೀರ್ಮಾನಿಸಲಾಗುತ್ತದೆ. ಋತ ಅಥವಾ ವೈಶ್ವಿಕ ವ್ಯವಸ್ಥೆಯ ನಿಯತಿಯನ್ನು ಸಾಮಾಜಿಕ ವ್ಯವಸ್ಥೆಗೂ ಅನ್ವಯಿಸಲಾಗುತ್ತಿತ್ತು. ವೈದಿಕ ಆರ್ಯರು ತಮ್ಮ ನೈತಿಕ ಆಚರಣೆಯ ಬಲದಿಂದ ಇದನ್ನು ಎತ್ತಿಹಿಡಿದು ನಿರ್ವಹಿಸಲು ಶ್ರಮಿಸುತ್ತಿದ್ದರು. ಋತದ ಉಲ್ಲಂಘನೆಯಿಂದ ಅವರು ಆರಾಧಿಸುತ್ತಿದ್ದ ವೈದಿಕ ದೇವತೆಗಳು ಅಸಮಾಧಾನ ಹೊಂದುತ್ತಿದ್ದರು. 'ಋಣ'ವನ್ನು ತೀರಿಸಬೇಕು ಎಂಬ ಅವರ ಜೀವನತತ್ತ್ವವೂ ಕೂಡಾ ನೀತಿಧರ್ಮಗಳನ್ನು ಎತ್ತಿಹಿಡಿದು ಬಾಳುವುದಕ್ಕೆ ಅವರಿಗೆ ಸಹಾಯಕವಾಗುತ್ತಿತ್ತು. ಪ್ರತಿಯೊಬ್ಬನೂ ಕೂಡಾ ಸಮಾಜದ, ಹಿರಿಯರ, ಗುರುಗಳ, ದೇವತೆಗಳ ಮತ್ತು ಪ್ರಾಕೃತಿಕ ಶಕ್ತಿಗಳ ಋಣಕ್ಕೆ ಕರ್ತವ್ಯಪ್ರಜ್ಞೆಯಿಂದ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದನು. ವೇದಗಳ ಭಾಗವಾದ ಬ್ರಾಹ್ಮಣಗಳ ಮುಖ್ಯ ಬೋಧನೆಯೆಂದರೆ ಜೀವನವನ್ನು ಕೇವಲ ಭೋಗದ ಉದ್ದೇಶದಿಂದ ನೋಡದೆ, ಕರ್ತವ್ಯ ಮತ್ತು ಹೊಣೆಗಾರಿಕೆಯ ದೃಷ್ಟಿಕೋನದಿಂದಲೂ ಪರಿಭಾವಿಸಬೇಕು ಎಂಬುದು.

ಪ್ರಕೃತಿ ಮತ್ತು ಉಳಿದ ಎಲ್ಲರೊಂದಿಗೆ ಸಾಮರಸ್ಯದಿಂದ ಬಾಳುವುದು ಆ ಜನರ ನೈತಿಕ ಜೀವನದ ತಳಹದಿಯಾಗಿತ್ತು. ಇವೆಲ್ಲಾ ಮಾರ್ಗದರ್ಶನಗಳು ಇದ್ದರೂ ಸಹ ಮಾನವ ಸ್ವಭಾವದಲ್ಲಿರುವ ದೌರ್ಬಲ್ಯಗಳಿಂದ ಯಾವುದೇ ಸಮಾಜದಲ್ಲಿ ವೈಪರೀತ್ಯಗಳು ಸಂಭವಿಸಿಬಿಡುತ್ತದೆ.

ಸನಾತನ ಆರ್ಯರು ಆಳವಾದ ಧಾರ್ಮಿಕ ಶ್ರದ್ಧೆಯುಳ್ಳವರಾಗಿದ್ದರು ಎಂದು ವೇದಗಳಿಂದ ತಿಳಿದುಬರುತ್ತದೆ. ಅಲ್ಲಿ ನಾವು ಅನೇಕ ದೇವದೇವತೆಗಳನ್ನು ಉದ್ದೇಶಿಸಿರುವ ಮಂತ್ರಗಳನ್ನು ಕಾಣುತ್ತೇವೆ. ಇವು ಪ್ರಾಕೃತಿಕ ಶಕ್ತಿಗಳ ಸಾಕಾರರೂಪಗಳಿದ್ದಿರಬಹುದು. ಇದರಿಂದ ವೈದಿಕ ಆರ್ಯರು ಬಹುದೇವತಾ ಆರಾಧಕರಾಗಿದ್ದರು ಎಂಬ ಭಾವ ಮೂಡುತ್ತದೆ. ಅನೇಕ ದೇವದೇವತೆಗಳನ್ನು ಅವರು ಪೂಜಿಸುತ್ತಿದ್ದರೂ, ಆ ಎಲ್ಲಾ ಶಕ್ತಿಗಳೂ, ವ್ಯಕ್ತಿತ್ವ

ಗಳೂ ಏಕೈಕ ಪರಾತ್ಪರ ದೇವನ ಮತ್ತು ಈಶ್ವರನ ವಿಭಿನ್ನ ಪ್ರಕಟರೂಪಗಳು ಅಥವಾ ಆವಿರ್ಭಾವಗಳು ಎಂಬುದಾಗಿ ಅವರು ತಿಳಿದಿದ್ದರು. ಆದ್ದರಿಂದ ಅವರು ಏಕದೇವೋಪಾಸನೆಯಲ್ಲಿಯೂ ನಂಬಿಕೆ ಇಟ್ಟಿದ್ದರು. ಮ್ಯಾಕ್‌ಡೋನೆಲ್ ಎಂಬ ಚಿಂತಕರು ಇದನ್ನು ''ಬಹುದೇವತಾ ಆರಾಧನೆಯ ಏಕದೇವೋ ಪಾಸನೆ'' ಎಂದು ಕರೆದಿದ್ದಾರೆ. ಅಗ್ನಿಯನ್ನು ಆಧರಿಸಿದ ಸರಳವಾದ ಯಜ್ಞ ಯಾಗಾದಿಗಳ ಮೂಲಕ ವೈದಿಕ ಆರ್ಯರು ದೇವತೆಗಳನ್ನು ಪೂಜಿಸುತ್ತಿದ್ದರು. ಕಾಲಕ್ರಮೇಣ ಈ ಯಜ್ಞ-ಯಾಗಗಳು ವಿಸ್ತೃತವೂ, ಸಂಕೀರ್ಣವೂ ಆಗಿ ಪರಿಣಮಿಸಿದವು. ಪ್ರತಿಮೆ, ಪ್ರತಿಕೃತಿಗಳನ್ನು ಪೂಜಿಸುವುದು ಅವರಿಗೆ ತಿಳಿದಿರಲಿಲ್ಲ ಎಂದೇನೂ ಇಲ್ಲ. ಏಕೆಂದರೆ ಇಂಡಸ್-ಸರಸ್ವತಿ ಪ್ರದೇಶಗಳನ್ನು ಅಗೆದಾಗ ಹಲವಾರು ಮೂರ್ತಿಗಳು, ಪ್ರತಿಮೆಗಳು ಲಭ್ಯವಾಗಿವೆ. ಕೆಲವು ವೇದಮಂತ್ರಗಳು ಅದ್ವೈತದ ಪರಾಕಾಷ್ಠೆ ಯನ್ನು ನಿರೂಪಿಸುತ್ತವೆ. ಇವುಗಳೇ ಕಾಲಾನಂತರದಲ್ಲಿ ಉಪನಿಷತ್ತುಗಳಲ್ಲಿ ಕೇಂದ್ರ ವಿಷಯವಾಯಿತು, ವೇದಾಂತವೆನಿಸಿತು. ಸಕಲ ವೈದಿಕ ಕರ್ಮಗಳೂ ವಾಸ್ತವವಾಗಿ ಈ ಪ್ರಧಾನ ಗುರಿಯಲ್ಲಿಯೇ ಪರಿಣಮಿಸುತ್ತವೆ. ಅತ್ಯಂತ ಆಳವಾದ ಆಧ್ಯಾತ್ಮಿಕ ಒಳನೋಟಗಳನ್ನು ಮತ್ತು ಅಮೂಲ್ಯವಾದ ಉನ್ನತವಾದ ಅನುಭಾವಿಕ ಅಭಿವ್ಯಕ್ತಿಗಳನ್ನು ಉಪನಿಷತ್ತುಗಳು ಹೊಂದಿವೆ. ಅವುಗಳಲ್ಲಿ ನಾವು ಗಮನಾರ್ಹವಾದ ಸಾಂಸ್ಕೃತಿಕ ಪ್ರಗತಿಯನ್ನು ಕಾಣಬಹುದು. ವೇದಾಂತವು ಆ ಕಾಲದ ಜ್ಞಾನದ ಬೆಳವಣಿಗೆಯ ಗುಣಮಟ್ಟದ ದ್ಯೋತ ಕವೂ ಆಗಿದೆ. ಹೀಗಾಗಿ ಉಪನಿಷತ್ತುಗಳು ವಿಶ್ವದ ಮಹೋನ್ನತ ಧಾರ್ಮಿಕ, ತಾತ್ತ್ವಿಕ ಮತ್ತು ಆಧ್ಯಾತ್ಮಿಕ ಶಾಸ್ತ್ರಗ್ರಂಥಗಳಲ್ಲಿ ಒಂದೆನಿಸಿದೆ.

### ವೇದೋತ್ತರ ಕಾಲ

ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ವೇದಗಳ ನಂತರದ ಕಾಲವು ಒಂದು ಮಹತ್ತರ ಸಂಕ್ರಮಣಕ್ಕೆ ಸಾಕ್ಷಿಯಾಯಿತು. ಆ ಮಹತ್ತರ ಬದಲಾವಣೆಯನ್ನು ಸ್ವತಃ ಉಪನಿಷತ್ತುಗಳೇ ಪ್ರೇರಿಸಿದವು ಎಂದು ಹೇಳಬಹುದು. ಬ್ರಾಹ್ಮಣಗಳು ಬೋಧಿಸುತ್ತಿದ್ದ ಸಂಕೀರ್ಣವಾದ ಯಜ್ಞಯಾಗಾದಿಗಳ ವಿಧಿವಿಧಾನಗಳ ಬಗ್ಗೆ ತೀವ್ರ ಪ್ರತಿಕ್ರಿಯೆಗಳೂ, ಅಸಹನೆಯೂ ಉಂಟಾದವು. ಈ ಪ್ರತಿಕ್ರಿಯೆ ಅಥವಾ ಪ್ರತಿಭಟನೆಯ ಪರಿಣಾಮವಾಗಿ ಹಲವು ಧಾರ್ಮಿಕ ಪಂಗಡಗಳೂ, ಮತಗಳೂ ಅಸ್ತಿತ್ವಕ್ಕೆ ಬಂದವು. ಒಂದು ಅಂದಾಜಿನ ಪ್ರಕಾರ ಅರವತ್ತಕ್ಕೂ ಹೆಚ್ಚು ತಾತ್ತ್ವಿಕ ಮತ್ತು ಧಾರ್ಮಿಕ ಸಿದ್ಧಾಂತಗಳು ದೇಶದಲ್ಲಿ ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದವು ಎಂದು ಹೇಳಲಾಗಿದೆ. ಅವುಗಳಲ್ಲಿ ಸಾಂಪ್ರದಾಯಿಕವಾದವು ಮತ್ತು ಸಂಪ್ರದಾಯ ವಿರೋಧಿಗಳಾದವೂ ಇದ್ದವು. ಇದೇ ಕಾಲದ ಕೊಡುಗೆಯಾದ ಭಗವದ್ಗೀತೆಯು ಈ ವಾಸ್ತವಿಕ ಬದಲಾವಣೆಗಳಿಗೆ ಸಾಕ್ಷಿಯಾಗಿ ನಿಂತಿದೆ. ಅದರ ದಾರ್ಶನಿಕ ಚೌಕಟ್ಟಿನಲ್ಲಿ ಅನೇಕ ಧಾರ್ಮಿಕ ಮತ್ತು ತಾತ್ತ್ವಿಕ ಚಿಂತನೆಗಳು, ದೃಷ್ಟಿಕೋನಗಳು ತಮ್ಮ ವಿರೋಧಿ ನಿಲುವುಗಳನ್ನು ಕಳೆದುಕೊಳ್ಳುತ್ತಾ, ಅರ್ಥಪೂರ್ಣವಾಗಿ ಸಮನ್ವಯಗೊಳ್ಳುತ್ತಾ ಒಂದು ಮಹಾ ಆಧ್ಯಾತ್ಮಿಕ ಸೌಧದ ಭಾಗಗಳಾಗಿ ನಿಲ್ಲುವುದನ್ನು ಕಾಣುತ್ತೇವೆ.

ವೇದೋತ್ತರ ಕಾಲಘಟ್ಟದಲ್ಲಿ ವೈದಿಕಸಂಪ್ರದಾಯದ ವಿರುದ್ಧ ಧ್ವನಿಯನ್ನು ಎತ್ತಿ ಹೊರಹೊಮ್ಮಿದ ಬೌದ್ಧಮತ ಮತ್ತು ಜೈನ ಮತಗಳ ಉಗಮವನ್ನು ಕಾಣುತ್ತೇವೆ. ಅವು ವೈದಿಕ ಧರ್ಮಗಳ ಮೇಲೆ ತಮ್ಮದೇ ಆದ ಪ್ರಭಾವ ಮುದ್ರೆಯನ್ನು ಒತ್ತಿದವು. ವೈದಿಕ ಧರ್ಮವು ಪ್ರಧಾನವಾಗಿ ಗೃಹಸ್ಥಧರ್ಮವನ್ನು ಕೇಂದ್ರದಲ್ಲಿರಿಸಿಕೊಂಡ ವ್ಯವಸ್ಥೆಯಾಗಿತ್ತು. ಆದರೆ ಬೌದ್ಧಮತ ಮತ್ತು ಜೈನ ಧರ್ಮಗಳು ಸಂನ್ಯಾಸಕೇಂದ್ರಿತ ಧರ್ಮಗಳು. ವೇದಗಳಲ್ಲಿ ಸಂನ್ಯಾಸದ ಬಗ್ಗೆ ವಿಚಾರಗಳು ಇದ್ದರೂ ಕೂಡ ಬೌದ್ಧಮತ ಮತ್ತು ಜೈನ ಮತಗಳಲ್ಲಿರುವಂತೆ ವ್ಯವಸ್ಥಿತವಾದ ಸಂನ್ಯಾಸಿ ಸಂಘಗಳು ಇರಲಿಲ್ಲ. ನಂತರದ ಹಿಂದೂಧರ್ಮಕ್ಕೂ ಈ ಎರಡು ಧರ್ಮಗಳ ಮಹತ್ತರ ಕೊಡುಗೆ ಇದೇ ಆಗಿದೆ ಎಂದು ಹೇಳಬಹುದು.

ಆರ್ಯರು ಭಾರತದಾದ್ಯಂತ ವಿಸ್ತರಿಸುತ್ತಾ ಹೋದಂತೆ ಅನೇಕ ಸ್ಥಳೀಯ ಸಾಂಸ್ಕೃತಿಕ ಮತ್ತು ಧಾರ್ಮಿಕ ಸಂಪ್ರದಾಯಗಳು ಆರ್ಯರ ವ್ಯವಸ್ಥೆಯ ತೆಕ್ಕೆಯೊಳಗೆ ಸೇರಿಸಲ್ಪಟ್ಟವು. ಅನ್ಯ ಸಂಸ್ಕೃತಿಗಳು ಮತ್ತು ಆರ್ಯರ ನಡುವಿನ ಸಂವಾದದಿಂದ ವೈಷ್ಣವ ಮತ, ಶೈವ ಮತ ಮತ್ತು ಶಾಕ್ತಮತಗಳಂತಹ ನೂತನ ಪಂಥಗಳು ಹುಟ್ಟಿಕೊಂಡವು. ಸಾಂಖ್ಯ ಮತ್ತು ಯೋಗಗಳಂತಹ ತಾತ್ತ್ವಿಕ ಪಂಗಡಗಳು ವೇದಪ್ರಾಮಾಣ್ಯವನ್ನು ಸ್ವೀಕರಿಸಿದ ಮತ್ತು ತಮ್ಮದೇ ಆದ ಶಾಸ್ತ್ರಗಳನ್ನು ಹೊಂದಿರುವ ದರ್ಶನಗಳಾಗಿವೆ. ಈ ಎಲ್ಲಾ ಕಾರಣಗಳಿಂದ ಹಿಂದೂಧರ್ಮವು ಯಾವುದೇ ಬದಲಾವಣೆ ಹೊಂದದೆ ಇಂದಿಗೂ ಉಳಿದು ನಿಂತಿದೆ. ಡಿ.ಎಸ್. ಶರ್ಮರವರು ಹೇಳುತ್ತಾರೆ: ''ಕ್ರಿಸ್ತಶಕ ೩೦೦ರ ಅಂತ್ಯದ ವೇಳೆಗೆ ಎಲ್ಲಾ ಮುಖ್ಯ ಗುಣಲಕ್ಷಣಗಳನ್ನು ಹಿಂದೂಧರ್ಮವು ತನ್ನದಾಗಿಸಿ ಬೆಳೆಸಿಕೊಂಡಿತ್ತು. ಇಂದು ಚೆನ್ನಾಗಿ ಪ್ರಚಲಿತವಿರುವ ನಿರಾಕಾರ ನಿರ್ವ್ಯಕ್ತಿತ್ವ ಬ್ರಹ್ಮದ ಪರಿಕಲ್ಪನೆ, ಸಗುಣ ಈಶ್ವರನ ಆರಾ ಧನೆ, ವೇದಗಳ ಪರಮಪ್ರಾಮಾಣ್ಯ, ಕರ್ಮ ಮತ್ತು ಪುನರ್ಜನ್ಮ ಸಿದ್ಧಾಂತ, ವರ್ಣಾಶ್ರಮಧರ್ಮದ ಸೂತ್ರಗಳು, ಧರ್ಮ- ಅರ್ಥ -ಕಾಮ-ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳು, ಕರ್ಮ - ಭಕ್ತಿ-ಜ್ಞಾನಗಳೆಂಬ ತ್ರಿವಿಧ ಮಾರ್ಗಗಳು, ತ್ರಿಮೂರ್ತಿ ಮತ್ತು ಅವತಾರ ತತ್ತ್ವಗಳು, ಮೂರ್ತಿಪೂಜೆ ಮತ್ತು ದೇವಸ್ಥಾನಗಳ ವಿಧಿಪೂರ್ವಕ ಪೂಜಾ ಪದ್ಧತಿಗಳು, ವೈಷ್ಣವರು, ಶೈವರು ಮತ್ತು ಶಾಕ್ತ ಪಂಗಡಗಳ ಶ್ರದ್ಧೆಗಳು ಮತ್ತು ಆಚರಣೆಗಳು, ತೀರ್ಥಯಾತ್ರೆ ಮತ್ತು ಕ್ಷೇತ್ರದರ್ಶನಗಳಲ್ಲಿ ವ್ಯಾಪಕವಾಗಿ ಬೆಳೆದಿರುವ ನಂಬಿಕೆಗಳು, ಗೋವುಗಳ ಮೇಲಿನ ಪೂಜ್ಯಭಾವನೆ ಇತ್ಯಾದಿ ಗಳನ್ನು ಕ್ರಿಸ್ತಶಕ ೩೦೦ರ ಕಾಲಘಟ್ಟದಲ್ಲಿಯೇ ಹಿಂದೂಧರ್ಮವು ಬೆಳೆಸಿಕೊಂಡಿತ್ತು. ನಂತರದ ಕಾಲದಲ್ಲಿ ಕೇವಲ ಕೆಲವು ವಿವರಗಳು ಅಲ್ಲಿ ಇಲ್ಲಿ ಸೇರಿಸಲ್ಪಟ್ಟವು ಅಷ್ಟೆ. ಅದಕ್ಕೂ ಮುಂಚೆ ಚದುರಿ ಚೆಲ್ಲಾಪಿಲ್ಲಿಯಾಗಿದ್ದ ಆದರ್ಶಗಳನ್ನು ನಂತರ ವ್ಯವಸ್ಥಿತವಾಗಿ ರೂಪುಗೊಳಿಸಲಾಯಿತು.''

ಈ ಕಾಲದಲ್ಲಿ ನಾಟಕೀಯ ಬದಲಾವಣೆಗಳು ಆದವು.

ಆರ್ಯರ ಸಾಮಾಜಿಕ ವ್ಯವಸ್ಥೆಯೊಳಕ್ಕೆ ವಿದೇಶೀಯ ಅಥವಾ ಅನ್ಯಜನಾಂಗಗಳು ಬೆರೆತು ಒಂದಾದಂತೆ, ಸಮಾಜವು ಒಂದು ಮಹತ್ತರವಾದ ರೂಪಪರಿವರ್ತನೆಗೆ ಒಳಗಾಯಿತು. ನಾಲ್ಕು ಪ್ರಧಾನ ವರ್ಣಗಳು, ಜಾತಿವ್ಯವಸ್ಥೆ ಮತ್ತು ಅನೇಕ ಉಪಜಾತಿಗಳು ಆಳವಾಗಿ ಬೇರುಬಿಟ್ಟು ಕಠೋರ ಸಾಂಸ್ಥಿಕ ರೂಪ ಪಡೆಯತೊಡಗಿದವು. ಜನ್ಮವು ಇದನ್ನೆಲ್ಲಾ ನಿರ್ಧರಿಸುವ ಅಸ್ಮಿತೆಯಾಯಿತು. ಬಹಾದ್ದೂರ್ ಮಲ್ ಹೇಳುತ್ತಾರೆ: ''ಗುಪ್ತರ ಕಾಲದ ಅಂತ್ಯಕಾಲದಲ್ಲಿ, ಕ್ರಿಸ್ತಶಕ ೫ನೇ ಶತಮಾನದ ವೇಳೆಗೆ ಜಾತಿವ್ಯವಸ್ಥೆಯ ಶ್ರೇಣೀಕೃತ ವಿಭಾಗಗಳು ಸ್ಥಿರವಾದ ರೂಪಗಳನ್ನು ಪಡೆದುಬಿಟ್ಟವು. ಆದರೆ ಅದು ಸ್ಥಗಿತವಾದ ವ್ಯವಸ್ಥೆಯಾಗಿರದೆ, ವಲಸೆ, ಸಂಯೋಜನೆ ಮತ್ತು ಉಪವಿಭಾಗಗಳಿಂದ ಹೊಸ ಹೊಸ ಉಪಜಾತಿಗಳು ತಮ್ಮ ಸ್ಥಾನವನ್ನು ಕಳೆದುಕೊಂಡರೆ ಹೊಸ ಉಪಜಾತಿಗಳು ತಮ್ಮ ಸ್ಥಾನವನ್ನು ತುಂಬಿದವು. ಈ ರೀತಿಯ ಗೌಣವಾದ ವೈವಿಧ್ಯತೆಗಳೊಂದಿಗೆ ಜಾತಿವ್ಯವಸ್ಥೆಯು ಶಾಶ್ವತವೆನಿಸುವ ಲಕ್ಷಣವನ್ನು ಪಡೆದುಕೊಂಡಿತು. ನಂತರದ ಶತಮಾನಗಳಲ್ಲಿ ಅದು ಹೀಗೆಯೇ ಮುಂದುವರಿಯಿತು.'' *('A Story of Indian Culture', p.202)*

ಸ್ತ್ರೀಯರ ಪರಿಸ್ಥಿತಿಯೂ ಕೂಡ ಈ ಕಾಲದಲ್ಲಿ ಶೋಚನೀಯ ಮಟ್ಟಕ್ಕೆ ಇಳಿದುದು ಸ್ಪಷ್ಟವಾಗಿದೆ. ಕಾಲಕ್ರಮೇಣ ಬಾಲ್ಯವಿವಾಹವು ಹಿಂದೂಸಮಾಜದಲ್ಲಿ ಒಂದು ಸಾಮಾನ್ಯ ಪದ್ಧತಿಯಾಗಿಬಿಟ್ಟಿತು. ಆಗ ಆರ್ಯರು ವಿಸ್ತರಿಸಿದರು. ಆರ್ಯೇತರ ಜನಾಂಗದ ಜನರು ಮುಖ್ಯವಾಹಿನಿಗೆ ಸೇರಿಸಲ್ಪಟ್ಟರು. ನೈತಿಕ ಮಟ್ಟವು ಕುಸಿದು ಸಮಾಜವು ವಿಪರೀತ ಬದಲಾವಣೆ ಹೊಂದಿತು. ಹೀಗಾಗಿ ಸ್ತ್ರೀಯರ ಸ್ವಾತಂತ್ರ್ಯದ ಮೇಲೆ ನಿರ್ಬಂಧವನ್ನು ಹೇರುವ ಅಗತ್ಯ ಕಂಡುಬಂದಿತು. ಇದು ಸಾಮಾಜಿಕ ರಕ್ಷಣೆಯ ಕ್ರಮವೂ ಆಗಿತ್ತು. ''ಪೂರ್ಣ ಪಾವಿತ್ರ್ಯವನ್ನು ಕಾಪಾಡಿಕೊಳ್ಳಲು, ಧರ್ಮಪಾಲಕರು ಆ ಕಾಲದಲ್ಲಿ ಮಹಿಳೆಯರಿಗಿದ್ದ ಸ್ವಾತಂತ್ರ್ಯವನ್ನು ಪೂರ್ಣವಾಗಿ ತೆಗೆದುಹಾಕಿದರು. ಮದುವೆಯ ವಯಸ್ಸನ್ನು ತಗ್ಗಿಸಿದರು. ಪುರುಷನನ್ನೇ ಪೂರ್ಣವಾಗಿ ಸ್ತ್ರೀಯು ಅವಲಂಬಿಸುವಂತೆ ಮಾಡಿಬಿಟ್ಟರು.'' *(ಅಲ್ಲೇ, ಪು.೨೦೨)* ವಿಮರ್ಶಕರಾದ ಆನಂದ ಕುಮಾರಸ್ವಾಮಿಯವರು ಹೇಳುತ್ತಾರೆ: ''ಸ್ತ್ರೀತ್ವವನ್ನು ಸಾಮಾಜಿಕ ಅನುಕೂಲತೆಯ ಮತ್ತು ಪವಿತ್ರತೆಯ ಕಾರಣಕ್ಕಾಗಿ ಬಲಿಕೊಡಲಾಯಿತು.'' ಆದರೆ ಸ್ವಾಮಿ ಅಭೇದಾ ನಂದರು ದೃಢವಾಗಿ ಪ್ರತಿಪಾದಿಸುತ್ತಾರೆ: ''ಬಾಲ್ಯವಿವಾಹವು ಭಾರತದ ಒಂದು ದೊಡ್ಡ ಶಾಪವೆಂದು ಹೇಳಲಾಗುತ್ತಿದೆ. ಮತ್ತು ಇದಕ್ಕೆ ಧರ್ಮವೇ ಅನುಮತಿ ನೀಡಿದೆ ಎಂದು ನಂಬಲಾಗಿದೆ. ಆದರೆ ಇದು ಸತ್ಯವಲ್ಲ. ಧರ್ಮವು ಅತ್ಯಂತ ಸ್ಪಷ್ಟವಾಗಿ ಇದನ್ನು ನಿಷೇಧಿಸಿದೆ. ಭಾರತದ ಹಲವಾರು ಪ್ರದೇಶಗಳಲ್ಲಿ, ಬಾಲ್ಯ ವಿವಾಹವೆಂಬುದು ಕೇವಲ ನಿಶ್ಚಿತಾರ್ಥವಾಗಿದೆ. ನಿಶ್ಚಯವಾದ ಕನ್ಯೆಯು ನಿಜವಾಗಿ ವಿವಾಹವಾಗುವವರೆಗೂ ತನ್ನ ತಂದೆಯ ಮನೆಯಲ್ಲಿಯೇ ಇರುತ್ತಾಳೆ.'' *(Complete Works of Swami Abhedananda, Vol.2, Ramakrishna Vedanta Math, Calcutta, 1967. p.143).*

ಎ.ಎಲ್.ಬಾಷಮ್ ಅವರು ಅವಲೋಕಿಸಿ ನುಡಿಯುತ್ತಾರೆ: ''ಪುರಾತನ ಜಗತ್ತಿನ ಯಾವುದೇ ಭಾಗದಲ್ಲಿ ಮನುಷ್ಯ– ಮನುಷ್ಯರ ನಡುವಿನ ಸಂಬಂಧ ಅಥವಾ ಮನುಷ್ಯ ಮತ್ತು ಸರ್ಕಾರದ ನಡುವಿನ ಸಂಬಂಧವು ಭಾರತದಲ್ಲಿದ್ದಷ್ಟು ಸಮಂಜಸವಾಗಿಯೂ, ಮಾನವೀಯವಾಗಿಯೂ ಇದ್ದದ್ದು ಕಂಡುಬರುವುದಿಲ್ಲ. ಪುರಾತನ ಭಾರತೀಯ ನಾಗರಿಕತೆಯಲ್ಲಿ ಎದ್ದು ಕಾಣುವ ಲಕ್ಷಣವೆಂದರೆ ಅದರ ಮಾನವೀಯತೆ.'' *(Wonder That was India).* ಭಾರತದ ಪ್ರಥಮ ನ್ಯಾಯಾಂಗ ಸಮಿತಿಯು ನೀಡಿದ ವರದಿಯು ಮೇಲ್ಕಂಡ ದಾಸ್ಯದ ಮೇಲಿನ ವಾಸ್ತವಾಂಶಕ್ಕೆ ಸಾಕ್ಷಿಯಾಗಿದೆ (೧೮೪೧): ''ಗುಲಾಮರಿಗೆ ಉತ್ತಮ ಆಹಾರ, ಬಟ್ಟೆಯನ್ನು ನೀಡಿ ಸಹಾನುಭೂತಿಯಿಂದ ಅವರನ್ನು ಕಾಣಲಾಗುತ್ತಿತ್ತು. ಶ್ರಮಿಕ ವರ್ಗದ ಕೂಲಿಗಾರರರ ಸ್ಥಿತಿಯಂ ತೆಯೇ ಗುಲಾಮರ ಜೀವನ ಸ್ಥಿತಿಯೂ ಇದ್ದಿತು.'' *(Caste, Religion and Country, S.V. Desikachar, ನಲ್ಲಿ ಉದ್ಧೃತ, Orient Longman, 1993, p.54-55)* ಸುಲೇಖಾ ಚಂದ್ರ ಗುಪ್ತ ಅವರ ಪ್ರಕಾರ ''ಗ್ರಾಮೀಣ ಸಮು ದಾಯದ ಒಳಗಿರುವ ಅನೇಕ ಪಂಗಡಗಳ ಹಕ್ಕುಗಳು ಮತ್ತು ಸವಲತ್ತುಗಳ ಸಂಗತಿಯು ಜಾತಿ ಎಂಬ ಅಂಶದಿಂದ ಪರಿಗಣಿತ ವಾಗುತ್ತಿರಲಿಲ್ಲ. ಕಡೇಪಕ್ಷ ಬ್ರಿಟಿಷರು ಭಾರತವನ್ನು ಆಕ್ರಮಿಸಿ ಕೊಳ್ಳುವ ಮುಂಚಿನ ಕಾಲದಲ್ಲಿ ಜಾತಿಯಿಂದ ಪರಿಗಣಿಸಲಾಗು ತ್ತಿರಲಿಲ್ಲ. ಗ್ರಾಮದ ಆರ್ಥಿಕತೆಗೆ ಹೊಂದಿಕೊಂಡಂತೆ ಮತ್ತು ಜನರು ಮಾಡುತ್ತಿದ್ದ ಕಾಯಕದ ಸ್ವರೂಪಕ್ಕೆ ಅನುಗುಣವಾಗಿ ಸ್ಥಾನಮಾನಗಳನ್ನು ನಿರ್ಧರಿಸಲಾಗುತ್ತಿತ್ತು.'' *(ಅಲ್ಲೇ, ಪು. ೫೫)*

ಆಗಿನ ಸಮಾಜದ ಜನರ ದೈನಂದಿನ ಜೀವನವನ್ನು ನಿರ್ಧರಿಸುತ್ತಿದ್ದ ಪರಿಣಾಮಕಾರಿ ಸಾಹಿತ್ಯವೆಂದರೆ ಸ್ಮೃತಿಗಳು, ಪುರಾಣಗಳು ಮತ್ತು ರಾಮಾಯಣ, ಮಹಾಭಾರತಗಳೆಂಬ ಮಹಾಕಾವ್ಯಗಳು. ಮನುಸ್ಮೃತಿಯಂತಹಾ ಸ್ಮೃತಿಗ್ರಂಥಗಳು ವರ್ಣಾಶ್ರಮ ಧರ್ಮ ವ್ಯವಸ್ಥೆಯ ನೀತಿ ನಿಯಮಗಳನ್ನು ಪ್ರಸ್ತಾಪಿಸುತ್ತವೆ. ತಾತ್ತ್ವಿಕ ಮತ್ತು ಧಾರ್ಮಿಕ ಸತ್ಯಗಳನ್ನು ವ್ಯಕ್ತಪಡಿಸುವ ಕಥೆಗಳನ್ನು ಪುರಾಣಗಳು ಹೊಂದಿವೆ. ಈ ಪೌರಾಣಿಕ ಕಥೆಗಳು ದೇವತೆಗಳು ಮತ್ತು ವೈಶ್ವಿಕ ಘಟನೆಗಳನ್ನು ಕುರಿತು ಹೇಳುತ್ತವೆ. ಅಮೆರಿಕಾದ ಧರ್ಮಚಿಂತಕ ರೀನೋಲ್ಡ್ ನೈಬುರ್ ಹೇಳುತ್ತಾರೆ: ''ಈ ಕಥೆಗಳು ಒಂದು ಮಹಾ ಸತ್ಯದ ಪರವಾಗಿ ಇರುವ ಅನೇಕ ಚಿಕ್ಕಚಿಕ್ಕ ಸುಳ್ಳುಗಳನ್ನು ಹೇಳುತ್ತವೆ.'' ಅತಿಶಯೋಕ್ತಿಗಳೆನಿಸುವ ಈ ಕಥೆಗಳು ಕೆಲವು ಧಾರ್ಮಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಸತ್ಯಗಳನ್ನು ಸಾಂಕೇತಿಕವಾಗಿ ಪ್ರತಿನಿಧಿಸುತ್ತವೆ. ಭಾರತೀಯ ಸಮಾಜದ ಎಲ್ಲ ಸ್ತರದ ಜನರ ಜೀವನ ಮತ್ತು ಸ್ವಭಾವಗಳನ್ನು ಪ್ರಭಾವಿಸಿ ರೂಪಗೊಳಿಸಿರುವ ಅಂಶಗಳೆಂದರೆ ರಾಮಾಯಣ ಮತ್ತು ಮಹಾಭಾರತದ ಪಾತ್ರಗಳು. ಈ ಎರಡು ಮಹಾಕಾವ್ಯಗಳ ಪ್ರಭಾವವು ಭಾರತೀಯರ ಮೇಲೆ ಅತ್ಯಂತ ಗಾಢವಾದದ್ದು ಮತ್ತು ಭಾರತದ ಗಡಿಯನ್ನು ದಾಟಿ ಅದು ವ್ಯಾಪಿಸಿಕೊಂಡಿದೆ. ಮಿಖೆಲ್ ಡಾನಿನ ಹೇಳುತ್ತಾರೆ: ''ಎರಡು ಮಹಾಕಾವ್ಯಗಳು,

ಕಾಳಿದಾಸನ ಅಭಿಜ್ಞಾನ ಶಾಂಕುಂತಲದಂತಹ ಸಾಹಿತ್ಯ ಕೃತಿಗಳು ಹಲವಾರು ಪೀಳಿಗೆಯ ಕವಿಗಳು ಮತ್ತು ಲೇಖಕರ ಮೇಲೆ ಪ್ರಭಾವ ಬೀರಿದೆ. ಗಯಟೆಯಿಂದ ಆರಂಭಿಸಿ ಇವು ಸರ್ವರ ಮನಸ್ಸನ್ನೂ ಸೂರೆಗೊಂಡಿವೆ. ೧೭೯೨ರಲ್ಲಿಯೇ ಗಯಟೆಯು ತನ್ನ ಒಂದು ಕವನದಲ್ಲಿ ಶಾಕುಂತಲದ ಮಹಿಮೆಯನ್ನು ಸ್ತುತಿಸಿದ್ದಾನೆ.'' *(Indian Culture and India's Future, D.K.Print World, New Delhi, 2011, p.58)*

ವಿಜ್ಞಾನ ಮತ್ತು ಗಣಿತ ಕ್ಷೇತ್ರದಲ್ಲಿ ಭಾರತವು ಮಹೋನ್ನತ ಸಾಧನೆಯನ್ನು ಮಾಡಿತು. ಈಗ ವೈದಿಕ ಗಣಿತವು ಸುಪ್ರಸಿದ್ಧವಾಗಿದೆ. ಆಲ್ಬರ್ಟ್ ಐನ್‌ಸ್ಟೀನ್‌ನಂತಹಾ ವಿಜ್ಞಾನಿಯೂ ಕೂಡ ಗಣಿತ ಕ್ಷೇತ್ರಕ್ಕೆ ಭಾರತವು ನೀಡಿರುವ ಕಾಣಿಕೆಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾನೆ. ಜಯಂತ್ ನಾರ್ಲಿಕರ್ ಎಂಬ ಖಗೋಳ-ಭೌತಶಾಸ್ತ್ರಜ್ಞರು ಭಾರತದ ಗಣಿತ ಕ್ಷೇತ್ರದ ಬಗ್ಗೆ ಬರೆಯುತ್ತಾರೆ: ''ಶುಲ್ಬ ಸೂತ್ರವು ಪೈಥಾಗೊರಸ್‌ನ ಪ್ರಮೇಯ ವನ್ನು ಹೊಂದಿದೆ. ಆದರೆ ಇದು ಯೂಕ್ಲಿಡ್‌ನ ಪ್ರಮೇಯದಂತೆ. ವಾಸ್ತವವಾಗಿ ಅದು ಶುಲ್ಬ ಪ್ರಮೇಯ ಎಂದಿರಬೇಕಾಗಿತ್ತು. ವೈದಿಕ ಯುಗಕ್ಕೆ ಸೇರಿದ ಮತ್ತು ಸ್ವೀಕರಿಸಲ್ಪಟ್ಟ ಪ್ರಧಾನ ಆವಿಷ್ಕಾರಗಳೆಂದರೆ ಶೂನ್ಯ ಮತ್ತು ದಶಮಾಂಶ ಪದ್ಧತಿಯಲ್ಲಿ ಸಂಖ್ಯೆಗಳನ್ನು ಬರೆಯುವುದು.''*(The Scientific Edge, Penguin Books, 2003, p.4-5)* ಕುತೂಹಲಕರ ಸಂಗತಿಯೆಂದರೆ, ಕ್ರಿಸ್ತಶಕ ೮ನೇ ಶತಮಾನದಲ್ಲಿ ಖಲೀಫ್ ಅಬ್ದುಲ್ ಅಲ್ ಮಾಸುರ್ ಎಂಬಾತ ಬಾಗ್ದಾದಿನಲ್ಲಿ ಒಂದು ಅಂತರರಾಷ್ಟ್ರೀಯ ವಿಜ್ಞಾನ ಸಮ್ಮೇಳನವನ್ನು ಏರ್ಪಡಿಸಿದ್ದನು. ಜಗತ್ತಿನ ಎಲ್ಲಾ ಭಾಗದ ವಿದ್ವಾಂಸರೂ ಅದರಲ್ಲಿ ಭಾಗವಹಿಸಿದ್ದರು. ಅಲ್ಲಿ ಕಂಖ ಎಂಬ ಹಿಂದೂ ಖಗೋಳ ಶಾಸ್ತ್ರಜ್ಞನು ಗಣಿತಶಾಸ್ತ್ರದ ಚಿಂತನೆಯನ್ನೇ ಬದಲಿಸುವಂತಹ ವಿಚಾರವನ್ನು ಮಂಡಿಸಿದನು. ಅದು ಹೊರದೇಶಗಳಲ್ಲಿ ಇನ್ನೂ ಪರಿಚಿತವಾಗಿಲ್ಲದ ಹಿಂದೂ ಸಂಖ್ಯೆಗಳನ್ನು ಕುರಿತಾಗಿತ್ತು. *(ಅಲ್ಲೇ, ಪು. ೫೬)* ಚರಕ ಸಂಹಿತಾ ಮತ್ತು ಸುಶ್ರುತ ಸಂಹಿತಾ ದಂತಹಾ ಅಮೋಘ ವೈದ್ಯಕೀಯ ಶಾಸ್ತ್ರಗ್ರಂಥಗಳ ಬಗ್ಗೆ ನಾವು ತಿಳಿದೇ ಇದ್ದೇವೆ. ಏಷ್ಯಾ ಮತ್ತು ಯೂರೋಪಿನ ಅನೇಕ ಭಾಷೆಗಳಿಗೆ ಇವು ೯ ಮತ್ತು ೧೦ನೇ ಶತಮಾನಗಳಲ್ಲಿ ಅನುವಾದಗೊಂಡವು. ಜಯಂತ್ ನಾರ್ಲೀಕರ್ ನುಡಿಯುತ್ತಾರೆ: ''ಕ್ರಿ.ಶ. ೪೫೦ರಿಂದ ೧೧೫೦ರ ವರೆಗಿನ ಕಾಲಘಟ್ಟವನ್ನು ಭಾರತೀಯ ಖಗೋಳ ಶಾಸ್ತ್ರದ ಸುವರ್ಣಯುಗವೆಂದು ಪರಿಗಣಿಸಬಹುದು. ಇದು ಆರ್ಯಭಟ್ಟನಿಂದ ಎರಡನೇ ಭಾಸ್ಕರನವರೆಗೆ ವ್ಯಾಪಿಸಿರುವ ಕಾಲವಾಗಿದೆ.'' *(ಅಲ್ಲೇ, ಪು. ೧೦೭)*

ಮುಸಲ್ಮಾನರು ಭಾರತಕ್ಕೆ ಮೊದಲು ಬಂದದ್ದು ವಿದ್ಯೆ ಕಲಿಯುವುದಕ್ಕಾಗಿಯೇ ಹೊರತು ಗೆದ್ದು ವಿಜಯಿಗಳಾಗಲು ಅಲ್ಲ. ಅವರು ಭಾರತದಿಂದ ಹಲವಾರು ಜ್ಞಾನಪೂರ್ಣ ಗ್ರಂಥಗಳನ್ನು ಒಯ್ದರು. ಈ ಬೌದ್ಧಿಕ ಕೊಡುಗೆಗಳನ್ನು ಸ್ವೀಕರಿಸಿದ ಅರಬ್ ಲೇಖಕ ಯಾಕ್ವಿಬಿ ಕ್ರಿ.ಶ. ೮೫೦ರಲ್ಲಿ ದಾಖಲಿಸುತ್ತಾನೆ: ''ಬುದ್ಧಿಮತ್ತೆ ಮತ್ತು ಚಿಂತನೆಯಲ್ಲಿ ಹಿಂದುಗಳು ಇತರ ಎಲ್ಲ ದೇಶದವರನ್ನೂ ಮೀರಿಸುತ್ತಾರೆ. ಅವರು ಖಗೋಳಶಾಸ್ತ್ರ ಮತ್ತು ಜ್ಯೋತಿಷ್ಯಶಾಸ್ತ್ರಗಳಲ್ಲಿ ಉಳಿದವರಿಗಿಂತ ಹೆಚ್ಚು ನಿಖರವಾದ ಜ್ಞಾನವುಳ್ಳವರಾಗಿದ್ದಾರೆ. ಬ್ರಹ್ಮಸಿದ್ಧಾಂತವು ಅವರ ಬುದ್ಧಿಶಕ್ತಿಗೆ ಒಂದು ಉತ್ತಮ ಪುರಾವೆಯಾಗಿದೆ. ಈ ಗ್ರಂಥದಿಂದ ಗ್ರೀಕರು ಮತ್ತು ಪರ್ಷಿಯನ್ನರೂ ಸಹ ಲಾಭಪಡೆದರು.'' ಅರಬ್‌ನ ಇತಿಹಾಸಜ್ಞ ಕಾಸಿ ಬರೆಯುತ್ತಾನೆ: ''ಎಲ್ಲರಿಂದಲೂ ಹಿಂದೂಗಳು ವಿದ್ಯೆ ಮತ್ತು ವಿವೇಕದ ಉಸ್ತುವಾರಿಗಳೆಂದು ಪರಿಗಣಿಸಲ್ಪಟ್ಟಿದ್ದಾರೆ.'' *(ಭರತ್ ಝೋಗ್ರ ಅವರು The Statesman ನಲ್ಲಿ ಬರೆದ ಒಂದು ಲೇಖನದಿಂದ )*

ಕೇವಲ ಜ್ಞಾನ ಮತ್ತು ಸಂಸ್ಕೃತಿಯಲ್ಲಿ ಮಾತ್ರವಲ್ಲದೆ ಐಹಿಕ ಸಂಪತ್ತು ಮತ್ತು ಕೈಗಾರಿಕೆಗಳಲ್ಲಿಯೂ ಭಾರತವು ಶ್ರೀಮಂತವಾಗಿತ್ತು. ಮೋರ್‌ಲ್ಯಾಂಡ್ ಅವರ ಅಭಿಪ್ರಾಯವನ್ನು ಉಲ್ಲೇಖಿಸುತ್ತಾ ತಾರಾಚಂದ್ ಅವರು ಹೇಳುತ್ತಾರೆ: ''ಬಂಡವಾಳಶಾಹಿಗೂ ಪೂರ್ವದಲ್ಲಿಯೇ ಭಾರತೀಯ ಕೈಗಾರಿಕೆಯು ಇದ್ದರೂ ಕೂಡಾ ಭಾರತವು ಕೈಗಾರಿಕೋದ್ಯಮದ ಫಲಿತವಾದ ಮಧ್ಯಮ ವರ್ಗವನ್ನು ಉತ್ಪಾದಿಸಲಿಲ್ಲ. ಆದರೆ ಅಂತಿಮ ಉತ್ಪನ್ನ ಮತ್ತು ಉತ್ಪಾದನಾ ವಿಧಾನಗಳಲ್ಲಿ ಭಾರತವು ಆಗ ಸಮಕಾಲೀನ ಯೂರೋಪನ್ನು ಮೀರಿಸಿದ ಪ್ರಗತಿಯನ್ನು ಕೈಗಾರಿಕೆಯಲ್ಲಿ ಸಾಧಿಸಿತ್ತು.'' ''ವಿದೇಶಗಳಿಗೆ ರಫ್ತುಮಾಡುವ ವಾಣಿಜ್ಯದಲ್ಲಿ ಭಾರತವು ಅತ್ಯಂತ ಹೆಚ್ಚು ಕೈಗಾರಿಕಾ ಉತ್ಪನ್ನಗಳನ್ನು ರಫ್ತು ಮಾಡುವ ರಾಷ್ಟ್ರವಾಗಿತ್ತು. ಅದು ತನ್ನ ನೀಡುವ ಶಕ್ತಿಯ ಸ್ಥಾನವನ್ನು ೧೯ನೇ ಶತಮಾನದ ಆದಿಭಾಗದಲ್ಲಿಯೂ ಉಳಿಸಿಕೊಂಡಿತ್ತು.'' *(S.V.Deshikachar, Caste, Religion and Country, p.62)*

ಭಾರತವು ಇಂತಹ ಸ್ಥಾನವನ್ನು ಆ ಕಾಲದಲ್ಲಿ ಕೈಗಾರಿಕೆಯಲ್ಲಿ ಗಳಿಸಿತ್ತು ಎಂಬುದು ರಾಷ್ಟ್ರದಲ್ಲಿದ್ದ ಸಂಪತ್ತು ಸಮೃದ್ಧಿಯ ದ್ಯೋತಕವಾಗಿದೆ. ಸಮಕಾಲೀನ ಮುಸ್ಲಿಂ ಇತಿಹಾಸಜ್ಞ ಉಲ್ಬಬಿಯು ಮಥುರೆಯ ದೇವಸ್ಥಾನಗಳ ವರ್ಣನೆಯನ್ನು ಮಾಡುವಾಗಲೂ ಈ ವಿಷಯವು ವಿದಿತವಾಗುತ್ತದೆ: ''ಆ ಸ್ಥಳದಲ್ಲಿ ಭಾರತೀಯರ ಪೂಜಾಸ್ಥಾನವೊಂದಿತ್ತು. ಘಜ್ನಿ ಮಹಮದ್‌ನು ಆ ಸ್ಥಳಕ್ಕೆ ಬಂದಾಗ ಒಂದು ಅತ್ಯಂತ ಸುಂದರವಾದ ನಗರವನ್ನು ಕಂಡನು. ಇದೊಂದು ಸ್ವರ್ಗದಲ್ಲಿ ನಿರ್ಮಿತವಾದ ಸೌಧ ಎಂದೇ ಹೇಳಬಹುದಾಗಿತ್ತು.'' ಅಬ್ದುಲ್ ರಜಾಕ್ ಹೇಳುತ್ತಾನೆ: ''ವಿಜಯನಗರದ ವೈಭವವು ಅದೆಷ್ಟು ಮನೋಹರವಾಗಿತ್ತೆಂದರೆ ಆ ಬಗೆಯ ಸೌಂದರ್ಯವನ್ನು ಜನರು ಈ ಭೂಮಿಯ ಮೇಲೆ ಕಂಡಿರುವುದೂ ಇಲ್ಲ ಅಥವಾ ಕಿವಿಯಿಂದ ಕೇಳಿರುವುದೂ ಇಲ್ಲ.''
*(A Survey of Indian History, K.M.Panikkar, Asia Publishing House, 1997, p. 127 and 153 respectively).*

ವಿಜ್ಞಾನ, ವೈದ್ಯಕೀಯ , ಗಣಿತ ಇತ್ಯಾದಿ ಕ್ಷೇತ್ರಗಳಲ್ಲಿ ಭಾರತವು ಅಮೋಘ ಸಾಧನೆ ಮಾಡಲು ಮುಖ್ಯ ಕಾರಣವೆಂದರೆ ಆ ಕಾಲದಲ್ಲಿ ಭಾರತದಲ್ಲಿದ್ದ ಶ್ರೇಷ್ಠವಾದ ವಿದ್ಯಾಸಂಸ್ಥೆಗಳು. ತಕ್ಷ

ಶಿಲಾ ಎಂಬುದು ೭ನೆ ಶತಮಾನದಲ್ಲಿದ್ದ ಅಂತಹ ಒಂದು ಮಹಾ ಜ್ಞಾನಕೇಂದ್ರ. ''ತಕ್ಷಶಿಲಾ ವಿಶ್ವವಿದ್ಯಾಲಯವು ಗ್ರೀಸ್ ಮತ್ತು ಭಾರತದ ತತ್ತ್ವಶಾಸ್ತ್ರಜ್ಞರ ಸಂಗಮ ಸ್ಥಾನವಾಗಿತ್ತು. ಜೊತೆಗೆ ಈಜಿಪ್ಟ್ ಮತ್ತು ಬ್ಯಾಬಿಲೋನಿನ ವಿದ್ವಾಂಸರೂ ಅಲ್ಲಿಗೆ ಆಗ ಮಿಸುತ್ತಿದ್ದರು.'' *(A Story of Indian Culture, p. 239)* ಮತ್ತೊಂದು ಅದ್ಭುತವಾದ ಜ್ಞಾನಕೇಂದ್ರವೆಂದರೆ ನಳಂದಾ ವಿಶ್ವವಿದ್ಯಾನಿಲಯ. ಅದೊಂದು ಬೌದ್ಧರ ವಿಶ್ವವಿದ್ಯಾ ನಿಲಯವಾಗಿದ್ದರೂ, ಬ್ರಾಹ್ಮಣರ ಶಾಸ್ತ್ರಗ್ರಂಥಗಳು ಮತ್ತು ಇತರ ತತ್ತ್ವಶಾಸ್ತ್ರದ ಶಾಖೆಗಳನ್ನು ಕೂಡಾ ಬೋಧಿಸಲಾಗುತ್ತಿತ್ತು. ಅದೊಂದು ಉಚ್ಛ್ರಾಯ ಸ್ಥಿತಿಯಲ್ಲಿದ್ದ ಆವಾಸಿಕ ವಿದ್ಯಾಕೇಂದ್ರವಾಗಿತ್ತು. ಅಲ್ಲಿ ಸರಿ ಸುಮಾರು ಹತ್ತು ಸಾವಿರ ಜನರಿದ್ದು, ಅವರಲ್ಲಿ ಎಂಟುವರೆ ಸಾವಿರ ವಿದ್ಯಾರ್ಥಿಗಳು ಮತ್ತು ಉಳಿದವರೆಲ್ಲಾ ಅಧ್ಯಾಪಕರಾಗಿದ್ದರು. ಈ ಎರಡೂ ವಿಶ್ವವಿದ್ಯಾಲಯಗಳು ಭಾರತದ ಎಲ್ಲಾ ಭಾಗಗಳಿಂದ ಮತ್ತು ವಿದೇಶಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದ್ದವು. ಇವುಗಳ ಜೊತೆಗೆ ವಿಕ್ರಮಶಿಲಾ ದಂತಹ ಇತರ ವಿಶ್ವ ವಿದ್ಯಾಲಯಗಳೂ ಇದ್ದವು.

ಸಮಾಜದ ಎಲ್ಲಾ ವರ್ಗಗಳಿಗೂ ಶಿಕ್ಷಣದ ಅವಕಾಶವು ಮುಕ್ತವಾಗಿತ್ತು. ಆದಾಗ್ಯೂ, ಸಮಾಜದ ಎರಡು ಮುಖ್ಯ ಉನ್ನತ ಜಾತಿಗಳು ಈ ನಿಟ್ಟಿನಲ್ಲಿ ಹೆಚ್ಚು ಸೌಲಭ್ಯಯುತ ಸ್ಥಾನದಲ್ಲಿದ್ದವು. ಎಸ್.ವಿ.ದೇಶಿಕಾಚಾರ್ ಬರೆಯುತ್ತಾರೆ: ''ಮಾರ್ಟಿನ್, ಆಡಮ್ಸ್ ಮತ್ತು ಬುಚ್‌ಮನ್ ಅವರ ಅಧಿಕಾರಯುಕ್ತ ದಾಖಲೆಯನ್ನು ಆಧರಿಸಿ, ರಘುವಂಶಿಯವರು ಬರೆಯುವ ಪ್ರಕಾರ ಬೈದ್ಯರು, ಕಾಯಸ್ಥರು, ಅನೇಕ ಕರಕುಶಲಕರ್ಮಿಗಳ ವರ್ಗದವರು ಸಂಸ್ಕೃತವನ್ನು ಕಲಿಯುತ್ತಿದ್ದರು. ತಮ್ಮ ತಮ್ಮ ವೃತ್ತಿಗಳಿಗೆ ಅಗತ್ಯವಿದ್ದಷ್ಟು ಅಭ್ಯಸಿಸುತ್ತಿದ್ದರು. ಇದೊಂದು ಹೊಸ ಬೆಳವಣಿಗೆ ಎಂದು ಅನಿಸುವುದಿಲ್ಲ. ಕ್ರಿ.ಶ ೯೭೩ರಿಂದ ೧೨೦೦ರ ವರೆಗಿನ ಕಲ್ಯಾಣಿಯ ಚಾಲುಕ್ಯರ ಆಡಳಿತ ಕಾಲದಲ್ಲಿ ಶೂದ್ರ ಶಿಷ್ಯವರ್ಗವು ಇದ್ದಿತು. ಅವರು ಸಂಸ್ಕೃತ ವ್ಯಾಕರಣದಲ್ಲಿ ಪರಿಣಿತರಾಗಿದ್ದರು. ನಂತರ ಅವರು ಆಚಾರ್ಯರೂ ಆದರು. ಕಠೋರವಾದ ಜಾತಿಪರಿಗಣನೆಯಿಂದ ದೂರವಾಗಿದ್ದ ಉದಾರ ದೃಷ್ಟಿಯು ಶಿಕ್ಷಣಕ್ಷೇತ್ರದಲ್ಲಿತ್ತು. ಆ ಕಾಲಘಟ್ಟದಲ್ಲಿ ಉಳಿದ ದೇಶಗಳಲ್ಲಿದ್ದಂತೆ ಅದು ಸಂಕುಚಿತ ದೃಷ್ಟಿಯಿಂದ ಕೂಡಿ ಅನುದಾರವಾಗಿರಲಿಲ್ಲ.'' *(Caste, Religion and Country, p.64)* ವೈದಿಕ ಮತ್ತು ಧಾರ್ಮಿಕ ಶಾಸ್ತ್ರಗಳ ಅಧ್ಯಯನವು ಬಹುತೇಕ ಬ್ರಾಹ್ಮಣರಿಗೆ ಸೀಮಿತವಾಗಿದ್ದರೂ ಲೌಕಿಕ ಶಿಕ್ಷಣವನ್ನು ಎಲ್ಲಾ ವರ್ಗದವರೂ ಪಡೆಯಬಹುದಾಗಿತ್ತು.

ಅರಬ್ ತತ್ತ್ವಶಾಸ್ತ್ರಜ್ಞನಾದ ಅಬು ಉಮರ್ ಜಹಿತ್ (೮೬೮ ಕ್ರಿ.ಶ.) ಎಂಬಾತನು ಭಾರತದ ಸರ್ವಾಂಗೀಣ ಸಾಧನೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದಾನೆ: ''ಜ್ಯೋತಿಷ್ಯ ಮತ್ತು ಗಣಿತದಲ್ಲಿ ಭಾರತೀಯರು ಗಣನೀಯವಾದ ಪ್ರಗತಿಯನ್ನು ಸಾಧಿಸಿರುವರೆಂದು ನಾನು ಬಲ್ಲೆ. ವೈದ್ಯಕೀಯ ವಿಜ್ಞಾನದಲ್ಲಿ ಅವರು ಪ್ರಮುಖವಾದ ಸ್ಥಾನವನ್ನು ಅಲಂಕರಿಸಿದ್ದಾರೆ. ಅವರಲ್ಲಿರುವ ಗುಪ್ತ ಜ್ಞಾನದಿಂದ ಅತ್ಯಂತ ಗಂಭೀರವಾದ ಗುಣವಾಗದ ರೋಗಗಳನ್ನು ಅವರು ಗುಣಪಡಿಸಬಲ್ಲರು. ಕಲ್ಲಿನ ಪ್ರತಿಮೆಗಳ ಕೆತ್ತನೆಯಲ್ಲಿ, ವರ್ಣಚಿತ್ರ ಕಲೆಯಲ್ಲಿ, ಕಟ್ಟಡಗಳ ಮೇಲೆ ಸುಂದರ ಚಿತ್ತಾರಗಳನ್ನು ಮೂಡಿಸುವುದರಲ್ಲಿ ಅವರು ಉತ್ಕೃಷ್ಟತೆಯನ್ನು ಸಾಧಿಸಿರುವರು. ಅವರು ಚದುರಂಗ ಎಂಬ ಅದ್ಭುತವಾದ ಬೌದ್ಧಿಕ ಕ್ರೀಡೆಯನ್ನು ಆವಿಷ್ಕಾರ ಮಾಡಿದ್ದಾರೆ. ಅವರ ಖಡ್ಗಗಳು ಅತ್ಯಂತ ತೀಕ್ಷ್ಣವಾದುದಾಗಿವೆ. ಖಡ್ಗಯುದ್ಧ ಕಲೆಯಲ್ಲಿ ಅವರು ನಿಷ್ಣಾತರಾಗಿದ್ದಾರೆ. ಮಂತ್ರಶಕ್ತಿಯಿಂದ ವಿಷದ ಪರಿಣಾಮವನ್ನು ನಿಷ್ಕ್ರಿಯಗೊಳಿಸುವ ಕಲೆಯು ಅವರಿಗೆ ಸಿದ್ಧಿಸಿದೆ. ಅವರ ಸಂಗೀತವು ಸುಮಧುರವೂ ಅತ್ಯಾಕರ್ಷಕವೂ ಆಗಿದೆ. ಅನೇಕ ಬಗೆಯ ಭಾರತೀಯ ನೃತ್ಯಪ್ರಕಾರಗಳು ಹೆಚ್ಚು ಜನಪ್ರಿಯವಾಗಿವೆ.'' *(Indian Culture and India's Future, Michel Danino, p.47 ರಲ್ಲಿ ಉದ್ಧೃತ)*

### ಮುಸಲ್ಮಾನರ ಪ್ರಾಬಲ್ಯದ ಕಾಲ

೮ನೆ ಶತಮಾನದ ಬಳಿಕ ಭಾರತೀಯ ಸಂಸ್ಕೃತಿಯು ತಗ್ಗಿನಲ್ಲಿ ಜಾರಲಾರಂಭಿಸಿತು. ಮಾನವನ ಅನ್ವೇಷಣೆಯ ಎಲ್ಲಾ ಆಯಾಮಗಳಲ್ಲಿಯು ಅವನತಿಯು ಆರಂಭವಾದ ಕಾಲ. ಜಾತಿ ವ್ಯವಸ್ಥೆಯು ಅತ್ಯಂತ ಕಠೋರವಾಗಿ ಬೇರುಬಿಟ್ಟ ದುಃಸ್ಥಿತಿಯ ಕಾಲ. ಕಲೆ ಮತ್ತು ಸಾಹಿತ್ಯಗಳಲ್ಲಿ ಯಾವುದೇ ಸ್ವಂತಿಕೆಯ ಪ್ರತಿಭೆಯು ಪ್ರಕಟವಾಗದ ಅವಧಿ. ವಿಜ್ಞಾನ ಮತ್ತು ತತ್ಸಂಬಂಧಿತ ಜ್ಞಾನ ಶಾಖೆಗಳಲ್ಲಿ ಯಾವುದೇ ಪ್ರಗತಿಯನ್ನು ಇಲ್ಲಿ ನಾವು ಕಾಣುವುದಿಲ್ಲ. ಸಾರ್ವಭೌಮಿಕ ಸ್ಥಾನಕ್ಕಾಗಿ ಹಲವಾರು ರಾಜರು ಪರಸ್ಪರ ಕಚ್ಚಾಡುತ್ತ ಸಾಗುವ ಈ ಕಾಲಘಟ್ಟದಲ್ಲಿ ರಾಷ್ಟ್ರವು ರಾಜಕೀಯವಾಗಿ ಅತ್ಯಂತ ದುರ್ಬಲವಾಯಿತು. ಹರ್ಷವರ್ಧನನ ನಂತರ ಉತ್ತರದಲ್ಲಿ ಯಾವುದೇ ಪ್ರಬಲವಾದ ಹಿಂದೂ ಸಾಮ್ರಾಜ್ಯವು ಉದಯವಾಗಲಿಲ್ಲ. ಅದಕ್ಕೂ ಮುನ್ನ ಭಾರತವು ಎಷ್ಟು ಸುಭದ್ರವಾದ ದೇಶವಾಗಿತ್ತೆಂದರೆ ಜಗತ್ತಿನ ಅರ್ಧಭಾಗವನ್ನು ಆಳುತ್ತಿದ್ದ ಮುಸ್ಲಿಂ ಖಲೀಫರು ಭಾರತವನ್ನು ಪ್ರವೇಶಿಸುವ ಧೈರ್ಯ ಮಾಡಿರಲಿಲ್ಲ.

ಸ್ವಾಮಿ ವಿವೇಕಾನಂದರ ಅಭಿಪ್ರಾಯದಂತೆ, ಭಾರತವು ತನ್ನ ಮಹಿಮೆಯಲ್ಲಿಯೇ ಸ್ವಯಂತೃಪ್ತವಾಗಿ, ಇತರ ಸಂಸ್ಕೃತಿಗಳೊಂದಿಗೆ ಯಾವುದೇ ಸಂವಾದವನ್ನು ಬೆಳೆಸದೇ ನಿಂತ ನೀರಾದುದೇ ಅವನತಿಗೆ ಪ್ರಧಾನ ಕಾರಣ. ಅಲ್ಬೆರೂನಿಯ ಅಧ್ಯಯನಶೀಲ ಮಾತುಗಳಲ್ಲಿಯೂ ಸ್ವಾಮಿ ವಿವೇಕಾನಂದರ ಒಳನೋಟವೇ ಪ್ರತಿಫಲಗೊಂಡಿದೆ: ''ಹಿಂದೂಗಳು ತಮ್ಮ ರಾಷ್ಟ್ರದಂತೆ ಮತ್ತೊಂದು ರಾಷ್ಟ್ರವಿಲ್ಲವೆಂದು ನಂಬುತ್ತಾರೆ; ಅವರ ಧರ್ಮದಂತೆ ಮತ್ತೊಂದು ಧರ್ಮವಾಗಲಿ, ಅವರ ರಾಜನಂತೆ ಮತ್ತೊಬ್ಬ ರಾಜನಾಗಲಿ ಇಲ್ಲವೆಂದು ಹೆಮ್ಮೆ ಪಡುತ್ತಾರೆ. ಸ್ವಲ್ಪ ಪ್ರವಾಸ ಮಾಡಿ ಇತರ ರಾಷ್ಟ್ರಗಳನ್ನು ಕಂಡು ಬೆರೆತಿದ್ದರೆ, ಭಾರತೀಯರು ಶೀಘ್ರವಾಗಿ ತಮ್ಮ ಅಭಿಪ್ರಾಯವನ್ನು ಬದಲಿಸಿಕೊಳ್ಳುವರು.

ವರ್ತಮಾನದ ಪೀಳಿಗೆಯ ಜನರಿಗೆ ಇರುವಷ್ಟು ಸಂಕುಚಿತ ದೃಷ್ಟಿಕೋನವು ಇವರ ಪೂರ್ವಜರಿಗೆ ಇರಲಿಲ್ಲ.'' *(A survey of Indian History' p.116-17 ರಲ್ಲಿ ಉದ್ಧೃತ)*

ಕೆ. ಎಂ. ಪಣಿಕ್ಕರ್ ಅವರು ನೀಡುವ ಕಾರಣವೆಂದರೆ: ''ಸುಮಾರು ಐದುನೂರು ವರ್ಷಗಳವರೆಗೆ, ತೋರಮನ್‌ನಿಂದ ಮೊಹಮದ್ ಘಜ್ನಿಯ ತನಕ ಭಾರತವು ಬಾಹ್ಯ ಆಕ್ರಮಣಗಳ ಬೆದರಿಕೆಗಳಿಂದ ಮುಕ್ತವಾಗಿತ್ತು. ಜಗತ್ತಿನ ಯಾವುದೇ ಉಳಿದ ದೇಶವು ಇಷ್ಟು ದೀರ್ಘಕಾಲ ವಿದೇಶೀ ಆಕ್ರಮಣಗಳಿಂದ ದೂರ ವಾಗಿರಲಿಲ್ಲ. ಅವಿರತವಾದ ಜಾಗೃತಿಯೇ ಸ್ವಾತಂತ್ರ್ಯಕ್ಕೆ ನಾವು ತೆರಬೇಕಾದ ಬೆಲೆ, ಇದು ಸಂಪೂರ್ಣವಾಗಿ ಕಣ್ಮರೆಯಾದ ಕಾಲ ವಿದು. ಅದರ ಫಲಿತಾಂಶವಾಗಿ ರಾಷ್ಟ್ರಜೀವನದ ಘನತೆ ಮತ್ತು ರಾಷ್ಟ್ರಭಕ್ತಿಯ ಭಾವವು ಸಂಪೂರ್ಣ ಮರೆಯಾಯಿತು. ಬಾಹ್ಯ ಒತ್ತಡ ಮತ್ತು ಆಕ್ರಮಣಗಳ ಅಪಾಯವಿದ್ದಾಗ ರಾಷ್ಟ್ರಪ್ರಜ್ಞೆಯು ಜಾಗೃತವಾಗಿ ಬೆಳೆಯುತ್ತಾ ಹೋಗುತ್ತದೆ. ಹೀಗಾಗಿ ಭಾರತವು ತನ್ನ ಗುಣಲಕ್ಷಣಗಳನ್ನು ಕಳೆದುಕೊಂಡಿತು.'' *(ಅಲ್ಲೇ, ಪು. ೧೧೬)*

ಶಕರು, ಕುಶಾನರು, ಹೂಣ ಇತ್ಯಾದಿ ವಿದೇಶೀ ಆಕ್ರಮಣ ಕಾರರು ಭಾರತೀಯ ಸಂಸ್ಕೃತಿಯ ವ್ಯವಸ್ಥೆಯೊಳಗೆ ಸಂಪೂರ್ಣ ವಾಗಿ ಹೀರಿಕೊಳ್ಳಲ್ಪಟ್ಟರು. ಇಲ್ಲಿಯೇ ಶತಮಾನಗಳ ಕಾಲ ನೆಲೆ ನಿಂತು ವಾಸಿಸಿದರೂ, ಮುಸಲ್ಮಾನರು ತಮ್ಮ ಸ್ವಂತ ಅಸ್ಮಿತೆಯನ್ನು ಉಳಿಸಿಕೊಂಡಿದ್ದರು. ಆದರೂ ಈ ಕಾಲದಲ್ಲಿ ಸಾಂಸ್ಕೃತಿಕ ಸಂವಾದಗಳೂ, ಪರಸ್ಪರ ಪ್ರಭಾವಗಳೂ ಹೊಸ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಚಲನೆಗಳನ್ನು ಉಂಟುಮಾಡಿದವು. ಮುಸ ಲ್ಮಾನರ ಪ್ರಾಬಲ್ಯವು ಭಾರತದಲ್ಲಿ ಆರಂಭವಾಗುವ ಮುನ್ನ ಸಂಸ್ಕೃತವು ಬಹುಮುಖ್ಯವಾದ ಸಾಹಿತ್ಯದ ವಾಹಕವಾಗಿತ್ತು. ಪಾಳಿ, ಅರ್ಧಮಾಗಧಿ ಮತ್ತು ನಾಲ್ಕು ದ್ರಾವಿಡ ಭಾಷೆಗಳಲ್ಲಿ ಹಲವಾರು ಕೃತಿಗಳು ಕಂಡುಬಂದರೂ ಸಂಸ್ಕೃತಕ್ಕೆ ಮುಂಚೆ ಅಗ್ರಸ್ಥಾನವಿತ್ತು. ಆದರೆ ಇಸ್ಲಾಂನ ಪ್ರಾಬಲ್ಯದ ನಂತರ, ಪರ್ಷಿಯನ್ ಭಾಷೆಯ ಪ್ರವೇಶವಾಗಿ, ಅದರ ಶ್ರೀಮಂತ ಸಾಂಸ್ಕೃತಿಕ ಹಿನ್ನೆಲೆಯು ಭಾರತದ ವಿವಿಧ ಪ್ರದೇಶಗಳ ಮೇಲೆ ಗಾಢವಾದ ಪ್ರಭಾವವನ್ನು ಉಂಟುಮಾಡಿತು. ಪ್ರಾದೇಶಿಕ ಭಾಷೆಗಳಲ್ಲಿ ಸಾಕಷ್ಟು ಸಾಹಿತ್ಯಕೃತಿಗಳಾದರೂ ಕೂಡ, ಸಂಸ್ಕೃತವು ಭಾರ ತೀಯ ನಾಗರಿಕತೆಯ ಸಂಪರ್ಕ ಭಾಷೆಯಾಗಿ ಕಾರ್ಯ ನಿರ್ವ ಹಿಸಿತು.

ಮಧ್ಯಕಾಲೀನ ಭಾರತೀಯ ಸಾಹಿತ್ಯಕ್ಕೆ ಮುಸಲ್ಮಾನರ ಕೊಡುಗೆಯನ್ನು ಉತ್ಪ್ರೇಕ್ಷಿಸಲಾಗದು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಉರ್ದು ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಯು ಅಂತಹ ಕೊಡುಗೆಯಾಗಿದೆ. ಭಾರತೀಯ ಮುಸಲ್ಮಾನ ಲೇಖಕರ ಕೃತಿಗಳಿಂದ ಹಲವು ಭಾರತೀಯ ಭಾಷೆಗಳೂ ಶ್ರೀಮಂತ ಗೊಂಡವು. ಅದೇ ಕಾಲದಲ್ಲಿಯೇ ಮಧುಸೂದನ ಸರಸ್ವತಿಗಳ 'ಅದ್ವೈತ ಸಿದ್ಧಿ' ಯಂತಹ ಶ್ರೇಷ್ಠ ತಾತ್ತ್ವಿಕ ಕೃತಿಯೂ ಲೋಕಾರ್ಪಣೆಯಾದುದರಿಂದ ಸಂಸ್ಕೃತ ಸಾಹಿತ್ಯವೂ ಹಿಂದೆ ಬೀಳಲಿಲ್ಲ.

ಮಹಾ ಆಚಾರ್ಯರುಗಳಾದ ರಾಮಾನುಜಾಚಾರ್ಯರು ಮತ್ತು ಮಧ್ವಾಚಾರ್ಯರು ಪ್ರಸ್ಥಾನತ್ರಯಗಳ ಮೇಲೆ ಭಾಷ್ಯಗಳನ್ನು ರಚಿಸಿದರು. ವೇದೋತ್ತರ ಕಾಲದಲ್ಲಿ ತತ್ತ್ವಶಾಸ್ತ್ರದ ವಿಭಿನ್ನ ದೃಷ್ಟಿಕೋನಗಳು ಪ್ರಸ್ತುತಪಡಿಸಲ್ಪಟ್ಟವು. ಇದರ ಬಹುತೇಕ ಗೌರವವು ನಿಸ್ಸಂದೇಹವಾಗಿ ಬೌದ್ಧ ಚಿಂತಕರಿಗೇ ಸಲ್ಲಬೇಕು. ಮುಸಲ್ಮಾನರ ಪ್ರಾಬಲ್ಯಕ್ಕೂ ಮುಂಚಿನ ಮತ್ತು ಅವರ ಕಾಲದಲ್ಲಿ ಹೊರಬಂದ ಎಲ್ಲಾ ತತ್ತ್ವಶಾಸ್ತ್ರದ ಕೃತಿಗಳು ಹಳೆಯ ಸಿದ್ಧಾಂತಗಳ ವಿಸ್ತೃತ ರೂಪವಾಗಿದ್ದವು ಮತ್ತು ಕಟುವಾದ ವಿಮರ್ಶೆಗಳಾಗಿದ್ದವು.

ವಿಜ್ಞಾನ ಮತ್ತು ಗಣಿತ ಕ್ಷೇತ್ರಗಳಲ್ಲಿ ನವೀನವಾದ ವಿಚಾರ ಗಳನ್ನು ಈ ಕಾಲದಲ್ಲಿ ಕಾಣುತ್ತೇವೆ. ಬ್ರಹ್ಮಗುಪ್ತ ಮತ್ತು ಭಾಸ್ಕರಾ ಚಾರ್ಯರು ಈ ಕಾಲದ ಪ್ರಸಿದ್ಧ ಖಗೋಳಶಾಸ್ತ್ರಜ್ಞರೂ ಮತ್ತು ಗಣಿತಶಾಸ್ತ್ರಜ್ಞರೂ ಆಗಿದ್ದಾರೆ. ಭಾಸ್ಕರಾಚಾರ್ಯನು ಗಣಿತದ ಸುಪ್ರಸಿದ್ಧ ಗ್ರಂಥ 'ಲೀಲಾವತಿ'ಯನ್ನು ರಚಿಸಿದನು. ಆತನು ಖಗೋಳಶಾಸ್ತ್ರದ ಮೇಲೆ ಕೂಡ ಗ್ರಂಥಗಳನ್ನು ಬರೆದನು. ಇವುಗಳಲ್ಲಿ ನ್ಯೂಟನ್ ಪ್ರಸ್ತಾಪ ಮಾಡುವ ಐದು ಶತಮಾನಕ್ಕೂ ಮೊದಲೇ ಗುರುತ್ವಾಕರ್ಷಣ ನಿಯಮದ ಸ್ಪಷ್ಟ ನಿರೂಪಣೆಯನ್ನು ಮಾಡಲಾಗಿದೆ ಎಂದು ಹೇಳಲಾಗಿದೆ. ೭ ಮತ್ತು ೮ನೆಯ ಶತ ಮಾನಗಳಲ್ಲಿ ಭಾರತೀಯ ಕಲೆಯು ಪರಿಪೂರ್ಣತೆಯನ್ನು ಸಾಧಿಸಿತು. ಕಲೆ ಮತ್ತು ವಾಸ್ತುಶಿಲ್ಪದ ಉತ್ತಮ ಮಾದರಿಗಳನ್ನು ಮುಸಲ್ಮಾನರ ಆಡಳಿತ ಕಾಲದಲ್ಲಿ ನಿರ್ಮಿಸಲಾಯಿತು. ಉದಾಹರಣೆಗೆ ತಾಜ್‌ಮಹಲ್ ಮತ್ತು ಕಾಶ್ಮೀರದ ಮೊಘಲ್ ಉದ್ಯಾನವನಗಳನ್ನು ಪರಿಗಣಿಸಬಹುದು. ಪರ್ಷಿಯನ್ ಮತ್ತು ಭಾರತೀಯ ಚಿತ್ರ ಕಲಾ ಶೈಲಿಯ ಸಮನ್ವಯದಿಂದ ಒಂದು ಹೊಸ ಬಗೆಯ ಚಿತ್ರಕಲೆಯನ್ನು ಕಂಡುಹಿಡಿದಿದ್ದು ಈ ಕಾಲದ ಒಂದು ಮಹತ್ತರ ಸಂಗತಿ.

ವೇದದ ಸಸ್ವರ ಮಂತ್ರೋಚ್ಚಾರಣೆಯಿಂದ ಭಾರತೀಯ ಸಂಗೀತವು ಉಗಮಿಸಿತು ಎಂಬುದು ಸರ್ವವಿದಿತವಾದ ವಿಷಯ. ಕಾಲಾನಂತರದಲ್ಲಿ ಸಂಗೀತವು ಒಂದು ಸ್ವತಂತ್ರ ಕ್ಷೇತ್ರವಾಗಿ ಬೆಳೆದು ರಾಗ, ಲಯಗಳ ಸ್ಪಷ್ಟ ನಿರೂಪಣೆ ಪಡೆಯಿತು. ಶಾಸ್ತ್ರೀಯ ಸಂಗೀತದ ಜೊತೆಗೆ ಹಲವಾರು ಪ್ರಕಾರದ ಜಾನಪದ ಮತ್ತು ಬುಡಕಟ್ಟು ಜನಾಂಗದ ಸಂಗೀತವು ಸಾಮಾನ್ಯ ಜನರನ್ನು ರಂಜಿಸುತ್ತಾ ಅಸ್ತಿತ್ವದಲ್ಲಿತ್ತು. ಸುಸಂಸ್ಕೃತ ವರ್ಗವು ಶಾಸ್ತ್ರೀಯ ಸಂಗೀತವನ್ನು ಗೌರವಿಸಿ ಪೋಷಿಸುತ್ತಿತ್ತು. ಅಲ್ಲಾವುದ್ದೀನ್ ಖಿಲ್ಜಿಯ ಆಸ್ಥಾನದಲ್ಲಿದ್ದ ಅಮಿರ್ ಖುಸ್ರೊ ಎಂಬ ಕವಿ ಮತ್ತು ಸಂಗೀತ ಗಾರನು ಹೇಳುತ್ತಾನೆ: ''ಭಾರತೀಯ ಮೂಲದ ಸಂಗೀತವು ವಿಶ್ವದಲ್ಲಿಯೇ ಸುಮನೋಹರವಾದುದು.'' ಪರ್ಷಿಯನ್ ಸಂಸ್ಕೃತಿಯು ಮುಸಲ್ಮಾನರ ಆಳ್ವಿಕೆಯ ಕಾಲದಲ್ಲಿ ಪ್ರವೇಶ ಮಾಡಿದ ಬಳಿಕ ಪರ್ಷಿಯನ್ ಸಂಗೀತವು ಭಾರತೀಯ ಸಂಗೀತ ದಲ್ಲಿ ಒಂದು ಬದಲಾವಣೆಯನ್ನು ಪರಿಣಾಮಕಾರಿಯಾಗಿ ತಂದಿತ್ತು. ಜೊತೆಗೆ ನವೀನ ರೀತಿಯ ಸಂಗೀತ ವಾದ್ಯಗಳು ಆವಿಷ್ಕಾರಗೊಂಡವು. ಈ ಪ್ರಭಾವದ ಪರಿಣಾಮವಾಗಿ, ಭಾರ ತೀಯ ಸಂಗೀತವು ಹಿಂದೂಸ್ಥಾನಿ ಮತ್ತು ಕರ್ನಾಟಕ ಎಂದು

ಎರಡು ಪ್ರಧಾನ ಶೈಲಿಗಳಾಗಿ ಪ್ರಚಲಿತವಾಯಿತು.

ಹಿಂದೂಧರ್ಮವೂ ಕೂಡ ಇಸ್ಲಾಂ ಮೇಲೆ ಬಹಳ ಪ್ರಭಾವ ಬೀರಿತು, ತತ್ಪರಿಣಾಮವಾಗಿ ಸೂಫಿ ಎಂಬ ಹೊಸ ಪಂಥವು ಹೊರಹೊಮ್ಮಿತು. ಸೂಫಿ ಪಂಥವು ಇಸ್ಲಾಂನ ಅನುಭಾವಿಕ ಆಯಾಮವಾಗಿದೆ. ಇದು ಭಾರತೀಯ ಸಾಹಿತ್ಯದ ಮೇಲೆ ಆಳವಾದ ಪರಿಣಾಮವನ್ನು ಬೀರಿತು ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಭಕ್ತಿಪೂರ್ಣವಾದ ರಚನೆಗಳ ಅಭಿವ್ಯಕ್ತಿಗೆ ಸ್ಫೂರ್ತಿ ಮತ್ತು ಪ್ರೇರಣೆ ಯನ್ನು ನೀಡಿತು. ಶಿಯಾ ಮತ್ತು ವೈಷ್ಣವ ತತ್ತ್ವಗಳ ಸಂಯೋಜನೆಯಾಗಿ ಖೋಜ ಪಂಗಡದ ಉದಯವಾಗಿದ್ದು ಈ ಕಾಲದ ಮತ್ತೊಂದು ಫಲ. ಅಲಿ-ಇಲಹಿಯಾಸ್ ಎಂಬ ಮುಸಲ್ಮಾನ ಪಂಗಡವು ಆಗ ಅಸ್ತಿತ್ವಕ್ಕೆ ಬಂದಿತು. ಇದು ಜೀವಾತ್ಮಗಳ ಜನ್ಮಾಂತರ ಪಯಣದಲ್ಲಿ ನಂಬಿಕೆ ಇಟ್ಟಿತ್ತು ಮತ್ತು ಮಾಂಸವನ್ನು ಸೇವಿಸುತ್ತಿರಲಿಲ್ಲ.

ಈ ರೀತಿಯ ಪರಸ್ಪರ ಪ್ರಭಾವಗಳಿದ್ದರೂ, ಬೌದ್ಧಧರ್ಮ ಮತ್ತು ಹಿಂದೂಧರ್ಮಗಳು ಸಂಖ್ಯೆಯ ದೃಷ್ಟಿಯಿಂದ ಮಹತ್ತರವಾದ ನಷ್ಟವನ್ನು ಅನುಭವಿಸಿದವು. ಇದಕ್ಕೆ ಮುಖ್ಯಕಾರಣವೇನೆಂದರೆ ಹಿಂಸಾಪ್ರದವಾದ, ಬಲವಂತದ, ಒತ್ತಾಯದಿಂದ ಮನವೊಲಿಸಿದ, ಇಸ್ಲಾಂ ಮತಾಂತರಗಳು. ಮುಸಲ್ಮಾನ ನಾಯಕರುಗಳ ವಿಗ್ರಹದ್ವೇಷ ಮನೋಭಾವ, ಆಕ್ರಮಣಕಾರಿ ನಿಲುವಿನಿಂದಾಗಿ ಪೂಜಾಸ್ಥಳಗಳ ಮತ್ತು ಸಾಹಿತ್ಯದ ನಾಶವು ಗಣನೀಯವಾಗಿ ಆಯಿತು. ''ಆರುನೂರು ವರ್ಷಗಳಿಗೂ ಮೀರಿದ ಮುಸಲ್ಮಾನರ ಆಡಳಿತಾವಧಿಯಲ್ಲಿ ಹಿಂದೂಗಳು ಅತ್ಯಂತ ಕಠೋರವಾದ ಭೇದಭಾವಸಹಿತವಾಗಿ ಹೇರಲ್ಪಟ್ಟ ಕಂದಾಯದ ಹೊರೆಯನ್ನು ಹೊರಬೇಕಾಯಿತು. ಸಹಿಷ್ಣುಗಳಾದ ಅಕ್ಬರ್ ಮತ್ತು ಅವನ ಇಬ್ಬರು ಉತ್ತರಾಧಿಕಾರಿಗಳ ಅವಧಿಗಳು ಮಾತ್ರವೇ ಇದಕ್ಕೆ ಅಪವಾದವೆಂದು ಹೇಳಬಹುದು. ಜಜ಼ಿಯಾ ತೆರಿಗೆ ಮತ್ತು ಹಲವಾರು ಧಾರ್ಮಿಕ ಮತ್ತು ಆರ್ಥಿಕ ನ್ಯೂನತೆಗಳಿಂದ ಹಿಂದೂಗಳು ಜರ್ಜರಿತರಾದರು.'' *(A Story of Indian Culture, p. 308)*

ಈ ಕಾಲದಲ್ಲಿ ಸಂಭವಿಸಿದ ಮತ್ತೊಂದು ಪ್ರಮುಖವಾದ ಬೆಳವಣಿಗೆಯೆಂದರೆ ಭಾರತದಾದ್ಯಂತ ವ್ಯಾಪಕವಾಗಿ ಹರಡಿದ ಭಕ್ತಿಮಾರ್ಗದ ಬೆಳವಣಿಗೆ ಮತ್ತು ಜನಪ್ರಿಯತೆ. ಇದಕ್ಕಾಗಿ ಆಚಾರ್ಯರುಗಳಾದ ರಾಮಾನುಜರು, ಮಧ್ವರು, ವಲ್ಲಭ ಮುಂತಾದವರು ಫಲವತ್ತಾದ ಭೂಮಿಕೆಯನ್ನು ಸಿದ್ಧಪಡಿಸಿದ್ದರು. ನೂರಾರು ಸಂತರು ಸಾಮಾನ್ಯ ಜನರಿಗೂ ಧರ್ಮವು ತಲುಪುವಂತೆ ಪರಿಶ್ರಮಿಸಿದರು, ತಮ್ಮ ಬೋಧನೆಗಳು ಭಕ್ತಿ ಕೀರ್ತನೆಗಳು ಮತ್ತು ಸರಳವಾದ ದೇವಸಮರ್ಪಿತ ಜೀವನದ ನಿದರ್ಶನಗಳನ್ನು ಜನರ ಮುಂದೆ ಇಟ್ಟರು. ಇದು ಸಾಕಷ್ಟು ಪ್ರಮಾಣದಲ್ಲಿ ಸಮಾಜದಲ್ಲಿ ಇಸ್ಲಾಂ ಮತಾಂತರೀಕರಣವನ್ನು ತಗ್ಗಿಸಿತು. ಹಲವು ಶತಮಾನಗಳ ಕಾಲ ಮುಸಲ್ಮಾನರು ದೇಶವನ್ನು ಆಳಿದರೂ, ಉಳಿದ ರಾಷ್ಟ್ರಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಂತೆ, ಭಾರತವು ಇಸ್ಲಾಮೀಕರಣಕ್ಕೆ ಒಳಗಾಗಲಿಲ್ಲ. ಕೆ.ಎಂ. ಪಣಿಕ್ಕರ್ ತಿಳಿಸುತ್ತಾರೆ: ''ಭಾರತವು ವಿಭಜನೆಯಾಗುವ ಕಾಲದಲ್ಲಿ (೧೯೪೭), ಮುಸಲ್ಮಾನರ ಆಳ್ವಿಕೆಯಲ್ಲೇ ಸತತವಾಗಿ ೬೦೦ ವರ್ಷಗಳ ಕಾಲವಿದ್ದ ಉತ್ತರಪ್ರದೇಶದಲ್ಲಿ ಕೇವಲ ಶೇಕಡಾ ೧೪ರಷ್ಟು ಮಾತ್ರ ಮುಸಲ್ಮಾನರ ಸಂಖ್ಯೆ ಇತ್ತು. ಹಿಂದೂಧರ್ಮವು ಸಾಂಸ್ಕೃತಿಕ ಆಘಾತವನ್ನು ತಡೆದುಕೊಂಡಿತು. ಬಲವಂತದ ಮತಾಂತರವು ಸ್ವಲ್ಪ ಭಾಗ ಮಾತ್ರವೇ ಇತ್ತು. ಸಾಕಷ್ಟು ಹಿಂದೂಗಳು ಕಠೋರವಾಗಿ ಪ್ರತಿಕ್ರಿಯಿಸಲಿಲ್ಲ.''*(A Story of Indian Culture, p. 142)*

ವಿಭಿನ್ನ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳಿದ್ದಾಗ್ಯೂ, ಮುಸಲ್ಮಾನರಿಗೆ ಭಾರತವು ಆಶ್ರಯ ನೀಡಿತು. ಅವರು ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಯ ಅವಿಭಾಜ್ಯ ಅಂಗವಾದರು. ನೂರಾರು ವರ್ಷಗಳ ಕಾಲ ಹಿಂದೂ ಮತ್ತು ಮುಸಲ್ಮಾನರು ಇಲ್ಲಿ ಸಹಬಾಳ್ವೆಯಿಂದ ಇರುವುದು ಜಗತ್ತಿನ ಇತಿಹಾಸದಲ್ಲೇ ವಿಶೇಷವಾದುದು ಎಂದು ಪರಿಗಣಿಸಲಾಗಿದೆ. ಸರ್ ಜಾನ್ ಮಾರ್ಷಲ್ ಹೇಳುತ್ತಾರೆ: ''ಮನುಕುಲದ ಚರಿತ್ರೆಯಲ್ಲಿ ಈ ಎರಡೂ ನಾಗರಿಕತೆಗಳ ಸಂಗಮವನ್ನು ಕಾಣಲಾಗಿಲ್ಲ, ಅಷ್ಟೊಂದು ವಿಸ್ತಾರವಾಗಿ ಬೆಳೆದಿರುವ, ಮೂಲಭೂತವಾಗಿ ವಿಭಿನ್ನವಾದ ಮುಸಲ್ಮಾನ ಮತ್ತು ಹಿಂದೂಧರ್ಮಗಳು ಪರಸ್ಪರ ಮಿಳಿತವಾದುದು ಒಂದು ಸೋಜಿಗ. ಅವುಗಳ ನಡುವಿನ ವ್ಯತ್ಯಾಸಗಳು ಮತ್ತು ಭಿನ್ನತೆಗಳು ಮಾನವ ಚರಿತ್ರೆಯಲ್ಲಿ ವಿಚಿತ್ರವಾದ ಒಂದು ಸೂಚನೆಯನ್ನು ನೀಡುತ್ತಿರುವಂತಿದೆ.''*(Creeds of our Times, Dr. Rafiq Zakaria, p.46)*

## ಆಧುನಿಕ ಕಾಲ

ಬ್ರಿಟಿಷರ ಆಧಿಪತ್ಯವು ಇಲ್ಲಿ ಸ್ಥಾಪಿತವಾದಾಗ ಭಾರತವು ಮತ್ತೊಂದು ಬಗೆಯ ದಮನಕ್ಕೆ ಒಳಗಾಗಬೇಕಾಯಿತು. ಮುಸಲ್ಮಾನರ ಆಡಳಿತದಲ್ಲಿ ತೇಜೋವಧೆಗೆ ಗುರಿಯಾಗಿದ್ದ ದೇಶದೊಳಗಿನ ಹಿಂದೂಗಳು ಬ್ರಿಟಿಷರ ಅವಮಾನೀಯ ಶೋಷಣೆಗೆ ಮತ್ತೆ ತುತ್ತಾದರು. ಅದು ಕೇವಲ ಮಾನವೀಯ ಘನತೆಯನ್ನು ಕಳೆದುಕೊಂಡ ಸಂಗತಿಯಲ್ಲ; ಆದರೆ ಗಣನೀಯವಾದ ಐಹಿಕ ಸಂಪತ್ತಿನ ನಷ್ಟದಿಂದ ರಾಷ್ಟ್ರವು ಆರ್ಥಿಕ ದುಃಸ್ಥಿತಿಗೆ ಇಳಿದು ದಾರಿದ್ರ್ಯವು ತಾಂಡವವಾಡತೊಡಗಿತು. ಭಾರತವು ಶ್ರೀಮಂತ ರಾಷ್ಟ್ರವೆಂದೂ, ಕೈಗಾರಿಕಾ ಉತ್ಪನ್ನಗಳನ್ನು ರಫ್ತು ಮಾಡುವ ಪ್ರಧಾನ ದೇಶವೆಂದೂ ಜಾಗತಿಕ ಮಟ್ಟದಲ್ಲಿ ಗಳಿಸಿದ್ದ ಸ್ಥಾನವನ್ನು ಕಳೆದುಕೊಂಡು ಕುಸಿಯಿತು. ಒಂದು ಅಂದಾಜಿನ ಪ್ರಕಾರ, ೧೭೫೦ ರಲ್ಲಿ ಜಗತ್ತಿನ ಒಟ್ಟು ಶೇಕಡಾ ೨೫ರಷ್ಟು ಕೈಗಾರಿಕೋತ್ಪನ್ನವನ್ನು ಭಾರತವೇ ಕಾಣಿಕೆಯಾಗಿ ನೀಡುತ್ತಿತ್ತು. ಆದರೆ ೧೯೦೦ರ ವೇಳೆಗೆ ಇದು ಶೇಕಡಾ ೨ರಷ್ಟಾಗಿ ಇಳಿಮುಖವಾಯಿತು ಎಂದು ಹಾರ್ವರ್ಡ್ ವಿಶ್ವವಿದ್ಯಾನಿಲಯದ ಸಂಶೋಧನೆಯು ತಿಳಿಸಿದೆ. ಶಿಕ್ಷಣ ಕ್ಷೇತ್ರದಲ್ಲಿ ಮತ್ತೊಂದು ಬಗೆಯ ಅಪಾರವಾದ ನಷ್ಟವು ಸಂಭವಿಸಿತು. ಮಹಾತ್ಮಾ ಗಾಂಧೀಜಿಯವರು ಹೇಳುತ್ತಾರೆ: ''೧೯೩೦ರ ದಶ

ಕದ ಭಾರತವು ಸುಮಾರು ೧೦೦ ವರ್ಷಗಳಷ್ಟು ಹಿಂದೆ ಇದ್ದುದ್ದಕ್ಕಿಂತಲೂ ಹೆಚ್ಚು ಅನಕ್ಷರಸ್ಥವಾಗಿದೆ.'' ವಿಲಿಯಮ್ ಆಡಮ್ಸ್‌ನ ವರದಿಯ ಪ್ರಕಾರ ೧೮೩೫ರಲ್ಲಿ ಬಂಗಾಳದಲ್ಲಿ ಒಂದು ಲಕ್ಷ ಶಾಲೆಗಳಿದ್ದವು. ಭಾರತದಲ್ಲಿ ಅಕ್ಷರಸ್ಥರ ಸಂಖ್ಯೆಯು ಶೇಕಡಾ ೩೩ ಇತ್ತು. ಆ ಕಾಲದಲ್ಲಿ ಇಂಗ್ಲೆಂಡಿನಲ್ಲಿಯೂ ವಿದ್ಯಾಭ್ಯಾಸವು ಈ ಮಟ್ಟದಲ್ಲಿ ಇರಲಿಲ್ಲ.

ಇಂಗ್ಲಿಷ್ ಶಿಕ್ಷಣ ವ್ಯವಸ್ಥೆಯು ಭಾರತೀಯರ ಮನಸ್ಸನ್ನು ಕೇವಲ ಸರ್ಕಾರಿ ಚಾಕರಿ ಮಾಡುವದಕ್ಕೇ ತರಬೇತಿ ನೀಡಿ ಸಿದ್ಧಗೊಳಿಸಿತು. ಇದರಿಂದ ಅತ್ಯಂತ ಶೋಚನೀಯವಾದ ಪರಿಣಾಮವು ದೇಶದ ಮೇಲೆ ಆಯಿತು. ಶಿಕ್ಷಿತ ಜನಾಂಗವು ಮಾನವನ ಜೀವನದ ಉತ್ಕೃಷ್ಟತೆಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಕೇವಲ ಪಾಶ್ಚಿಮಾತ್ಯರನ್ನೇ ಮಾದರಿಯಾಗಿಟ್ಟುಕೊಂಡು ಆರಾಧನಾ ಭಾವದಿಂದ ಕಾಣತೊಡಗಿತು. ಇದಕ್ಕೆ ಧಾರ್ಮಿಕ ಕ್ಷೇತ್ರವೂ ಹೊರತಾಗಿರಲಿಲ್ಲ. ಭಾರತದ ಭೂತಕಾಲದ ವರ್ಚಸ್ಸನ್ನು ಶಿಕ್ಷಣ ಪಡೆದ ಯುವಜನಾಂಗವು ತಿರಸ್ಕಾರ ಭಾವದಿಂದ ಕೂಡಿ ತುಚ್ಛವೆಂದು ನೋಡಲಾರಂಭಿಸಿತು. ಸ್ವಾಮಿ ವಿವೇಕಾನಂದರು ಈ ಪರಿಸ್ಥಿತಿಯ ದಾರುಣ ಚಿತ್ರವನ್ನು ಹೀಗೆ ನೀಡುತ್ತಾರೆ:

''ಮಗುವನ್ನು ಶಾಲೆಗೆ ಸೇರಿಸುತ್ತಾರೆ. ನಂತರ ಅದು ಮೊಟ್ಟಮೊದಲು ಕಲಿಯುವ ಸಂಗತಿಯೆಂದರೆ ತನ್ನ ತಂದೆಯು ಒಬ್ಬ ಮೂರ್ಖನಾಗಿದ್ದಾನೆ ಎಂಬುದು. ನಂತರ ತನ್ನ ಅಜ್ಜನು ಒಬ್ಬ ಹುಚ್ಚನಾಗಿದ್ದನೆಂದು ಅದು ಭಾವಿಸುತ್ತದೆ. ಮೂರನೆಯದಾಗಿ ತನಗೆ ಪಾಠ ಕಲಿಸಿದ ಶಿಕ್ಷಕರೆಲ್ಲರೂ ಕಪಟಿಗಳೆಂಬ ಅನಿಸಿಕೆಗೆ ತಲುಪುತ್ತದೆ. ನಾಲ್ಕನೆಯದಾಗಿ ನಮ್ಮ ಎಲ್ಲಾ ಪವಿತ್ರ ಶಾಸ್ತ್ರ ಗ್ರಂಥಗಳು ಸುಳ್ಳಿನ ಕಂತೆ ಎಂಬುದಾಗಿ ನಿರ್ಧರಿಸುತ್ತದೆ. ಅವನಿಗೆ ೧೬ ತುಂಬುವ ವೇಳೆಗೆ ಅವನ ಮನೋಭಾವವು ಶುಷ್ಕವಾಗಿ ಸಂಪೂರ್ಣ ನಿಷೇಧಾತ್ಮಕವಾಗಿ ಬಿಡುತ್ತದೆ.'' *(The Complete Works of Swami Vivekananda, Vol.3, p.301-02)*

ಜನಸಾಮಾನ್ಯರು ಮೂಢನಂಬಿಕೆಗಳಿಗೆ ಕುರುಡರಂತೆ ದಾಸರಾಗುತ್ತಿದ್ದರು. ಸ್ಥಳೀಯವಾದ ಸಂಪ್ರದಾಯಗಳನ್ನು ಚಾಚೂ ತಪ್ಪದೇ ಅನುಸರಿಸುತ್ತಾ ನಿಜವಾದ ವೇದ ಧರ್ಮಕ್ಕೆ ಅನ್ಯರಾಗಿಬಿಟ್ಟರು, ಸುಶಿಕ್ಷಿತ ಯುವಜನತೆಯು ನಮ್ಮ ಧರ್ಮ ಮತ್ತು ಸಂಸ್ಕೃತಿಯಲ್ಲಿ ಶ್ರದ್ಧೆಯನ್ನು ಕಳೆದುಕೊಂಡರು. ಪಾಶ್ಚಿಮಾತ್ಯರ ಕಣ್ಣು ಕೋರೈಸುವ ಸಾಧನೆಗಳ ಪ್ರಭಾವಕ್ಕೆ ಪರವಶರಾಗಿ ಮಾರುಹೋದರು. ದೇಶದ ಈ ಕಾಲದ ಬಹುದೊಡ್ಡ ದುರಂತವೆಂದರೆ ರಾಷ್ಟ್ರಾಭಿಮಾನವು ಎಲ್ಲರ ಮನಸ್ಸಿನಲ್ಲಿ ಮರೆಯಾಗಿ ಹೋಯಿತು. ಪಾಶ್ಚಿಮಾತ್ಯ ಸಂಸ್ಕೃತಿಯ ಆಕ್ರಮಣವನ್ನು ಎದುರಿಸಲು ಮತ್ತು ರಾಷ್ಟ್ರಾಭಿಮಾನವನ್ನು ಎತ್ತಿಹಿಡಿಯಲು ಅನೇಕ ಸಾಮಾಜಿಕ ಸುಧಾರಣೆಗಳು ಮೂಡಿಬಂದವು. ಆ ಬಗೆಯ ಒಂದು ಮಹಾ ಸಂಚಲನವೆಂದರೆ ರಾಜಾ ರಾಮಮೋಹನರಾಯರಿಂದ ಸಂಸ್ಥಾಪಿತವಾದ ಬ್ರಹ್ಮಸಮಾಜ. ಸಾಮಾಜಿಕ ಪಿಡುಗುಗಳಿಂದ ಮತ್ತು ಮೂಢನಂಬಿಕೆಗಳಿಂದ ಹಿಂದೂಧರ್ಮವನ್ನು ಪರಿಷ್ಕರಿಸಲು ಆತನು ಅವಿರತವಾಗಿ ಪರಿಶ್ರಮಿಸಿದನು. ಹಿಂದೂಧರ್ಮದ ಶ್ರೇಷ್ಠ ಅಂಶಗಳನ್ನು ಎತ್ತಿಹಿಡಿದನು. ತನ್ನ ಏಕದೇವತಾವಾದದ ಸಂಚಲನವನ್ನು ಉಪನಿಷತ್ತುಗಳ ಬೋಧನೆಯನ್ನು ಆಧರಿಸಿ ಎತ್ತಿಹಿಡಿದನು. ಮೂರ್ತಿಪೂಜೆಯು ಅಗತ್ಯವಿಲ್ಲವೆಂದು ತಿರಸ್ಕರಿಸಿದನು. ಆದರೆ ಬ್ರಹ್ಮಸಮಾಜವು ಬಂಗಾಳದ ಆಚೆಗೆ ವ್ಯಾಪಿಸಿಕೊಳ್ಳಲಿಲ್ಲ.

ಪಶ್ಚಿಮಭಾರತದಲ್ಲಿ ಮೂಡಿಬಂದ ಮತ್ತೊಂದು ಮಹಾ ಸಂಚಲನವೆಂದರೆ ಕ್ರಿಯಾಶೀಲ ಸಂನ್ಯಾಸಿ ಸ್ವಾಮಿ ದಯಾನಂದ ಸರಸ್ವತಿಗಳಿಂದ ಸ್ಥಾಪನೆಗೊಂಡ ಆರ್ಯಸಮಾಜ. ಅದು ಧೈರ್ಯದಿಂದ ಹಿಂದೂಧರ್ಮವನ್ನು ಸಮರ್ಥಿಸಿತು. ಮೂರ್ತಿ ಪೂಜೆ, ಜಾತಿಪದ್ಧತಿಗಳಿಲ್ಲದ ವೈದಿಕ ಧರ್ಮವನ್ನು ಪುನರುತ್ಥಾನಗೊಳಿಸಲು ದಯಾನಂದ ಸರಸ್ವತಿಗಳು ಪ್ರಯತ್ನಿಸಿದರು. ಅನ್ಯಧರ್ಮ ಗಳಿಗೆ ಮತಾಂತರಗೊಂಡ ಹಿಂದೂಗಳನ್ನು ಸೆಳೆದು ಸ್ವಧರ್ಮಕ್ಕೆ ಮರಳಿ ಬರುವ ವ್ಯವಸ್ಥೆಯನ್ನು ಅವರು ಮಾಡಿ ಮರು ಮತಾಂ ತರಕ್ಕೆ ಅವಕಾಶ ಕಲ್ಪಿಸಿಕೊಟ್ಟರು. ಆರ್ಯಸಮಾಜವು ಇಂದಿಗೂ ಜೀವಂತವಾಗಿದ್ದು, ದೇಶಾದ್ಯಂತ ತನ್ನ ಕೇಂದ್ರಗಳನ್ನು ಹೊಂದಿದೆ. ಶಾಲೆಗಳು, ಅನಾಥಾಶ್ರಮಗಳು, ನೈಸರ್ಗಿಕ ವಿಕೋಪ ಪರಿಹಾರ ಚಟುವಟಿಕೆಗಳ ರೂಪದಲ್ಲಿ ತನ್ನ ಸೇವಾಕಾರ್ಯಗಳನ್ನು ಮಾಡು ತ್ತಲೇ ಇದೆ. ಜನಸಾಮಾನ್ಯರ ಮೂಢನಂಬಿಕೆ ಗಳನ್ನು ತೊಡೆದು ಹಾಕಲು ಅವಿರತವಾಗಿ ಪ್ರಯತ್ನಿಸುತ್ತಿದೆ.

ಆದರೆ ಈ ಎಲ್ಲಾ ಸುಧಾರಣೆಗಳು ಹಿಂದೂಧರ್ಮವನ್ನು ಸಮಗ್ರವಾಗಿ ತನ್ನ ತೆಕ್ಕೆಯೊಳಕ್ಕೆ ತೆಗೆದುಕೊಳ್ಳಲು ಸಮರ್ಥವಾಗಲಿಲ್ಲ. ಕೇವಲ ಕೆಲವು ಸಾರಭೂತ ಅಂಶಗಳನ್ನು ಇವು ಪ್ರಧಾನವಾಗಿ ತೆಗೆದುಕೊಂಡು ಉಳಿದವುಗಳನ್ನು ಮೂಢನಂಬಿಕೆಯೆಂದೂ, ಜಳ್ಳುಪೊಳ್ಳು ಎಂದೂ ತಿರಸ್ಕರಿಸಿದವು. ಹಿಂದೂಧರ್ಮವನ್ನು ಸಮಗ್ರವಾಗಿ ಪುನರುಜ್ಜೀವನಗೊಳಿಸಿದವರೆಂದರೆ ಶ್ರೀರಾಮಕೃಷ್ಣರು. ಅವರು ಸಂಪೂರ್ಣ ಧರ್ಮಪ್ರಜ್ಞೆಯ ಸಾಕಾರ ರೂಪವಾಗಿದ್ದರು. ಧರ್ಮವನ್ನು ಮರಳಿ ಅದರ ಮೂಲಭೂತ ಶುದ್ಧಸ್ವರೂಪಕ್ಕೆ ಎತ್ತಿದರು. ಅಮುಖ್ಯವಾದ ಅಂಶಗಳು ಅನಗತ್ಯವೆಂದು ಅವರು ಖಂಡಿಸಲಿಲ್ಲ. ಬದಲಾಗಿ, ಸಾರಭೂತವಾದ ಕೇಂದ್ರಕ್ಕೆ ಅಥವಾ ಮುಖ್ಯಗುರಿಯೆಡೆಗೆ ನಡೆಯಲು ಇವೆಲ್ಲವೂ ಹಾದಿಯಲ್ಲಿರುವ ಪೋಷಕಾಂಶಗಳು ಎಂದು ಸಾರಿದರು. ಹಿಂದೂಧರ್ಮದ ಒಳಗೆ ಮತ್ತು ಹೊರಗೆ ಸಂಘರ್ಷದಲ್ಲಿ ತೊಡಗಿದ್ದ ವಿಭಿನ್ನ ಶ್ರದ್ಧೆಗಳನ್ನು ಅವರು ಸಾಮರಸ್ಯಗೊಳಿಸಿದರು. ಇದನ್ನು ಬೌದ್ಧಿಕ ತರ್ಕದ ಒತ್ತಾಯದಿಂದ ಸಾಧಿಸದೇ ಸ್ವಾನುಭವದ ಬೆಳಕಿನಲ್ಲಿ ಪ್ರತಿಪಾದಿಸಿದರು. ಶ್ರೀರಾಮಕೃಷ್ಣರ ಮೇಧಾವಿ ಶಿಷ್ಯರಾದ ಸ್ವಾಮಿ ವಿವೇಕಾನಂದರು ಸಾಮರಸ್ಯ ಮತ್ತು ಸ್ವೀಕಾರದ ಸಂದೇಶವನ್ನು ಜಗತ್ತಿನಾದ್ಯಂತ ಸಾರಿ ಬಿತ್ತಿದರು. ತಮ್ಮ ಗುರುಗಳ ಹೆಸರಿನಲ್ಲಿ ಸಂಘವೊಂದನ್ನು ಸ್ಥಾಪಿಸಿದರು. ಶ್ರೀರಾಮಕೃಷ್ಣ ಮಹಾಸಂಘವು ಉದಾರವಾದ ಚಿಂತನೆಗಳನ್ನು ಜನಮಾನಸದಲ್ಲಿ ಬಿತ್ತುತ್ತಾ, ಹಲವಾರು ಬಗೆಯಲ್ಲಿ ಸೇವಾಕಾರ್ಯಗಳನ್ನು

ಮಾಡುತ್ತಿದೆ. ದೇಶವಿದೇಶಗಳಲ್ಲಿ ಇದು ನೂರಾರು ಶಾಖಾ ಕೇಂದ್ರಗಳನ್ನು ಹೊಂದಿದೆ. ಸ್ವಾಮಿ ವಿವೇಕಾನಂದರ ಹೆಜ್ಜೆಯನ್ನು ಅನುಸರಿಸುತ್ತಾ ಸ್ವಾಮಿ ಅಭೇದಾನಂದರೂ ಸಹ ತಮ್ಮ ವಿದ್ವತ್ತು ಮತ್ತು ವಾಗ್ಮಿತೆಯಿಂದ ವೇದಾಂತದ ಮಹೋನ್ನತ ಆದರ್ಶಗಳನ್ನು ಪ್ರಸ್ತುತಪಡಿಸಿದರು. ಹಿಂದೂಧರ್ಮ ಮತ್ತು ಸನಾತನ ಸಂಸ್ಕೃತಿಯ ಬಗ್ಗೆ ಇರುವ ಎಲ್ಲಾ ದುರಭಿಪ್ರಾಯಗಳನ್ನೂ, ತಪ್ಪು ಕಲ್ಪನೆಗಳನ್ನೂ ತೊಡೆದುಹಾಕಲು ಯತ್ನಿಸಿದರು.

ಮತ್ತೊಂದು ಮಹಾವ್ಯಕ್ತಿಯೊಬ್ಬರನ್ನು ಸ್ಮರಿಸದೇ ಇರುವುದು ಈ ಸಂದರ್ಭದಲ್ಲಿ ಸಾಧ್ಯವಾಗುತ್ತಿಲ್ಲ. ತಮ್ಮ ಅಲ್ಪ ಜೀವಿತಾವಧಿಯಲ್ಲಿ ರಾಷ್ಟ್ರಪ್ರಜ್ಞೆಯನ್ನು ಭಾವೋದ್ದೀಪನಗೊಳಿಸಿದ, ಭಾರತಮಾತೆಯ ಸೇವೆಗೆ ತನ್ನನ್ನು ಸಮರ್ಪಿಸಿಕೊಂಡ ಸೋದರಿ ನಿವೇದಿತಾರನ್ನು ಮರೆಯಲು ಸಾಧ್ಯವೆ? ಆಕೆಯ ಅಭಿಮಾನಿಗಳು ಮತ್ತು ಅನುಯಾಯಿಗಳು ಕಲೆ, ಸಾಹಿತ್ಯ, ಕಾವ್ಯ, ಸ್ವಾತಂತ್ರ್ಯ ಸಂಗ್ರಾಮ ಮುಂತಾದ ಎಲ್ಲಾ ಕ್ಷೇತ್ರಗಳಲ್ಲೂ ಇದ್ದರು. ಅವರಲ್ಲಿ ಮಂದಗಾಮಿಗಳು, ಉಗ್ರಗಾಮಿಗಳೂ ಇದ್ದರು. ಥಿಯೋಸಾಫಿಕಲ್ ಸೊಸೈಟಿಯ ಅನಿಬೆಸೆಂಟ್‌ರವರು ಮತ್ತೊಬ್ಬ ಮಹಾನ್ ಬ್ರಿಟಿಷ್ ಮಹಿಳೆ. ಅವರು ಹಿಂದೂಧರ್ಮದ ಪರವಾಗಿ ನಿಂತಿದ್ದು ಮಾತ್ರವಲ್ಲ, ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡರು. ಶ್ರೀಅರವಿಂದ ಮಹರ್ಷಿಗಳು ಮುಂತಾದ ನೂರಾರು ಮಹಾತ್ಮರು ಹಿಂದೂಧರ್ಮವನ್ನೂ, ಭಾರತೀಯ ಸಂಸ್ಕೃತಿಯನ್ನೂ ಮೇಲೆತ್ತಲು ತಮ್ಮ ಪೂರ್ಣ ಜೀವನವನ್ನೇ ಸಮರ್ಪಿಸಿದರು.

ಭಾರತವು ಆಧ್ಯಾತ್ಮಿಕ ಗುರಿಯಾದ ನಿಃಶ್ರೇಯಸ್ಸಿನ ಪ್ರತಿಪಾದನೆ ಮಾಡಿದ್ದಕ್ಕಾಗಿ ಮಾತ್ರವೇ ಶ್ರೇಷ್ಠವಾಗಿಲ್ಲ. ಅದು ಅಭ್ಯುದಯ ಅಂದರೆ ಐಹಿಕ ಸಮೃದ್ಧಿಯನ್ನು ಸಾಧಿಸುವುದರಲ್ಲಿಯೂ ಮಹಾನ್ ರಾಷ್ಟ್ರವೇ ಆಗಿತ್ತು. ಭಾರತೀಯ ಸಂಸ್ಕೃತಿಯ ಫಲವತ್ತಾದ ಭೂಮಿಕೆಯು ಮಾನವಮನಸ್ಸಿನ ಸಕಲ ಆಶೋತ್ತರಗಳಿಗೂ ಪೋಷಣೆ ನೀಡಿತು. ಕೇವಲ ಆಧ್ಯಾತ್ಮಿಕ ಜ್ಞಾನಕ್ಕಾಗಿ ಮಾತ್ರವಲ್ಲದೆ, ಮಾನವ ಜೀವನದ ಹಲವಾರು ಆಯಾಮಗಳ ಸಾಧನೆಗಾಗಿಯೂ ಜಗತ್ತು ಭಾರತಕ್ಕೆ ಕೃತಜ್ಞವಾಗಿದೆ. ಸ್ವಾಮಿ ಅಭೇದಾನಂದರ ಒಂದು ಮನೋಜ್ಞವಾದ ಮಾತಿನಿಂದ ಈ ಲೇಖನವನ್ನು ಉಪಸಂಹಾರ ಮಾಡುವುದು ಸಮಂಜಸವೆನಿಸುತ್ತದೆ:

“ಆರ್ಯ ಸಂಸ್ಕೃತಿ ಮತ್ತು ನಾಗರಿಕತೆಯ ಅರುಣೋದಯವು ದಿಗಂತದಲ್ಲಿ ಗೋಚರಿಸಿದಾಗ, ಅದರ ಬೆಳಕಿನ ಕಿರಣಗಳು ಮೂಡಿ ನಿಂತಿದ್ದು ಗ್ರೀಸ್ ಅಥವಾ ರೋಮ್‌ನ ಮೇಲೆ ಅಲ್ಲ, ಅರೇಬಿಯಾ ಅಥವಾ ಪರ್ಷಿಯಾ ಮೇಲೆ ಅಲ್ಲ. ಆ ಪ್ರತ್ಯೂಷೆಯು ಸಂಭವಿಸಿದ್ದು ಭಾರತದಲ್ಲಿ! ಯಾವ ದೇಶವು ತತ್ತ್ವಶಾಸ್ತ್ರ, ಅನುಭಾವಿಕ ಶಾಸ್ತ್ರ, ತರ್ಕ, ಖಗೋಳಶಾಸ್ತ್ರ,


with Best Compliments from

**Technopolymers Pvt. Ltd.,**



**B-185, 2nd Stage, Industrial Estate, Peenya**
**Bangalore - 560 058 Tel : 28360264**
**e-mail : technopolymers.pvtltd@gmail.com**



**Contact for your requirements of:**



Vacuum Processed Epoxy Resin,
Cast Insulators and Bushings,
DMC & SMC Mouldings
Fiberglass Reinforced Plastic Mouldings,
FRP Tanks & Linings, Fiberglass Tubes & Rods
Thermoplastic & Thermoset
Industrial Plastic Mouldings

